RNI: KNKAN/ 25/A5387 | ಸಂಪಾದಕರು: ರಾಜೇಶ್ವರಿ ಎನ್. ಓಲೇಕಾರ | ಸಿಇಒ: ಚಂದ್ರಶೇಖರ ಎನ್.ಕೆ. | ಸಹ ಸಂಪಾದಕರು: ಶಿವಕುಮಾರ

ಸಮಾಲೋಚನೆ ಸುದ್ದಿ

ಕನ್ನಡ ದಿನ ಪತ್ರಿಕೆ

ನೇರ ನಿಖರ ನಿರ್ದಿಷ್ಟ

ಸಂಪುಟ (Volume): 1 ಸಂಚಿಕೆ (Issue): 225 ಪುಟ (Page): 4 ದರ Rs. 2 ಶುಕ್ರವಾರ 13 ನವೆಂಬರ್ 2026 ● 13 NOVEMBER 2026 ಹಾವೇರಿ ಧಾರವಾಡ ಗದಗ ಕೊಪ್ಪಳ ವಿಜಯನಗರ ಬೆಳಗಾವಿ ಉತ್ತರ ಕನ್ನಡ samalochanersuddi@gmail.com

ಮೊ.ನಂ: 8095203132 PMG/KA/NK/HVR-59/2026-28 SAMALOCHANE RANEBENNURSUDDI Kannada Daily Morning

ಶಂಕರ ಬನ್ನೂರು ಪರೀಕ್ಷೆ ಅಕ್ರಮ ಪ್ರಕರಣ

ನಾಲ್ವರು ಪೊಲೀಸರು ಅಮಾನತು, ನಾಲ್ವರ ಅಧಿಕಾರಿಗಳಿಗೆ ನೋಟಿಸ್ ಜಾರಿ

ಸಮಾಲೋಚನೆ ಸುದ್ದಿ ಹಾವೇರಿ.

ವಿಎಒ ನೇಮಕಾತಿ ಪರೀಕ್ಷೆ ಅಕ್ರಮ ಪ್ರಕರಣದಲ್ಲಿ ಪರೀಕ್ಷೆ ಕೊಠಡಿಯೊಳಗೆ ಮೊಬೈಲ್ ಫೋನ್ ತೆಗೆದುಕೊಂಡು ಹೋಗಲು ಅವಕಾಶ ನೀಡಿ ಕರ್ತವ್ಯಲೋಪ ಎಸಗಿದ ಹಿನ್ನೆಲೆಯಲ್ಲಿ ಪರೀಕ್ಷೆ ಕೇಂದ್ರಕ್ಕೆ ನಿಯೋಜಿಸಿದ ನಾಲ್ವರು ಪೊಲೀಸರನ್ನು ಅಮಾನತುಗೊಳಿಸಲಾಗಿದ್ದು, ಪರೀಕ್ಷೆ ಕೇಂದ್ರದ ಪ್ರಾಚಾರ್ಯ ಸೇರಿ ನಾಲ್ವರು ಸಿಬ್ಬಂದಿ ಅಮಾನತುಗೊಳಿಸಲು ನೋಟಿಸ್ ಜಾರಿಗೊಳಿಸಲಾಗಿದೆ. ಅಲ್ಲದೆ ಶಂಕರ ಬನ್ನೂರು ಪರೀಕ್ಷೆಯೇ ಬರೆದಿಲ್ಲವೆಂದು ಸಾಮಾಜಿಕ ಜಾಲತಾಣದಲ್ಲಿ ಹೇಳಿಕೆ ನೀಡಿರುವವರ ವಿರುದ್ಧವೂ ದೂರು ದಾಖಲಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ಹಾಗೂ ಎಸ್ಪಿ ಹೇಳಿದರು.

ಈ ಕುರಿತು ನಗರದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಯಶೋಧಾ ವಂಟಗೋಡಿ, ಶಂಕರ ಬನ್ನೂರು ಪರೀಕ್ಷೆ ಕೇಂದ್ರದೊಳಗೆ ಮೊಬೈಲ್ ತೆಗೆದುಕೊಂಡು ಹೋಗಿದ್ದರೂ ನಿಯೋಜನೆಗೊಂಡಿದ್ದ ಪೊಲೀಸರು ಗಮನ ಹರಿಸದೆ ಕರ್ತವ್ಯಲೋಪ ಎಸಗಿದ್ದಾರೆ.

ಈ ಹಿನ್ನೆಲೆಯಲ್ಲಿ ಸವಣೂರು ಪೊಲೀಸ್ ಠಾಣೆಯ ಮುಖ್ಯ ಪೇದೆ ರಾಜೇಶ್ವರಿ ಮನಕವಾಡ, ಶಿಗ್ಗಾಂವ ಠಾಣೆಯ ಮುಖ್ಯಪೇದೆ ವಿ.ಸಿ. ಹೊನ್ನಾಳಿ, ಸಿ.ಎ. ಮರೆಮ್ಮನವರ, ಆಡೂರು ಠಾಣೆಯ ಕಾನ್ಸ್ಟೆಬಲ್ ಎಸ್.ಎಸ್. ನಾಗನೂರು ಅಮಾನತುಗೊಂಡವರು. ಇನ್ನೂಳಿದ ಇಬ್ಬರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ಅಲ್ಲದೆ ಆರೋಪಿ ಶಂಕರ ಬನ್ನೂರು ಪರೀಕ್ಷಾ ಕೊಠಡಿಗೆ ಬಂದಿರಲಿಲ್ಲ ಎಂದು ಸಾಮಾಜಿಕ ಜಾಲತಾಣದಲ್ಲಿ ಹೇಳಿಕೆ ನೀಡಿರುವ ಅನಿಲ ಕಾಂಬ್ಳೆ ಹಾಗೂ ಸತೀಶ ಲಮಾಣಿ ಎಂಬುವರನ್ನು ವಿಚಾರಣೆಗೆ ಕರೆಯಲಾಗುವುದು. ಅವರು ಮಾಡಿರುವ ಆರೋಪಗಳ ಕುರಿತು ಮಾಹಿತಿ ಪಡೆದು ಪರಿಶೀಲಿಸಲಾಗುವುದು ಎಂದು ಹೇಳಿದರು.

ಪ್ರಕರಣದ ತನಿಖೆ ಮುಂದುವರಿದಿದ್ದು, ಅಗತ್ಯ ಸಾಕ್ಷ್ಯಾಧಾರಗಳನ್ನು ಸಂಗ್ರಹಿಸಲಾಗುತ್ತಿದೆ. ನಿಗದಿತ



ಅವಧಿಯೊಳಗೆ ದೋಷಾರೋಪ ಪಟ್ಟಿ ಸಲ್ಲಿಸಲು ಕ್ರಮ ಕೈಗೊಳ್ಳಲಾಗುವುದು. ಪರೀಕ್ಷಾ ಕೊಠಡಿಯ ಸಿಸಿಟಿವಿ ದೃಶ್ಯಾವಳಿಗಳನ್ನು ಒದಗಿಸುವಂತೆ ಸಂಬಂಧಪಟ್ಟ ಸಂಸ್ಥೆಗೆ ಪತ್ರ ಬರೆಯಲಾಗುವುದು. ತಾಂತ್ರಿಕ ಸಾಕ್ಷ್ಯಗಳನ್ನು ವಿಧಿವಿಜ್ಞಾನ ಪ್ರಯೋಗಾಲಯದ ಮೂಲಕವೂ ಪರಿಶೀಲಿಸಲಾಗುವುದು ಎಂದು ತಿಳಿಸಿದರು.

ಜಿಲ್ಲಾಧಿಕಾರಿ ಡಾ. ವಿಜಯಮಹಾಂತೇಶ ದಾನಮ್ಮನವರ ಮಾತನಾಡಿ, ಪ್ರಕರಣಕ್ಕೆ ಸಂಬಂಧಿಸಿದಂತೆ ಕರ್ತವ್ಯಲೋಪ ಎಸಗಿದ ಕಾಲೇಜ್ನ ಪ್ರಾಚಾರ್ಯ ಸೇರಿ ನಾಲ್ವರಿಗೆ ನೋಟಿಸ್ ನೀಡಲಾಗಿದೆ. ಪ್ರಾಥಮಿಕ ಪರಿಶೀಲನೆಯಲ್ಲಿ ಪ್ರಾಚಾರ್ಯ ರಾಮಕಾಂತ ಭಟ್, ಸಿಬ್ಬಂದಿಗಳಾದ ಬಸವರಾಜ ಸವದಿ, ರಾಜು ದೆಂಡೆಪ್ಪನವರ ಸೇರಿ ನಾಲ್ವರು ಕರ್ತವ್ಯಲೋಪ ಎಸಗಿರುವುದು ಕಂಡುಬಂದಿದೆ. ಇವರ ಮೇಲೆ ಶಿಸ್ತು ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಆಡಳಿತ ಮಂಡಳಿಗೆ ಪತ್ರ ಬರೆಯಲಾಗಿದೆ. ಅವರ ಕ್ರಮ ಕೈಗೊಂಡರೆ ಸರಿ, ಇಲ್ಲವಾದರೆ ಸರ್ಕಾರವೇ ಕ್ರಮ ಜರುಗಿಸಲಿದೆ ಎಂದರು.

ಅಲ್ಲದೆ, ಅಂದು ಪರೀಕ್ಷಾ ಕೇಂದ್ರದ ಮೇಲುಸ್ತುವಾರಿ ವಹಿಸಿದ್ದ ಲೋಕೋಪಯೋಗಿ ಇಲಾಖೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ಎಇಇ) ಅವರನ್ನು ಅಮಾನತುಗೊಳಿಸುವಂತೆ ಲೋಕೋಪಯೋಗಿ ಇಲಾಖೆಗೆ ಪತ್ರ ಬರೆಯಲಾಗಿದೆ ಎಂದು ತಿಳಿಸಿದರು. ಮುಂದಿನ ದಿನಗಳಲ್ಲಿ ಪರೀಕ್ಷಾ ಅಕ್ರಮ ತಡೆಗೆ ಪರೀಕ್ಷಾ ವ್ಯವಸ್ಥೆಯಲ್ಲಿ ಹಲವು ಬದಲಾವಣೆ ತರಲು ನಿರ್ಧರಿಸಲಾಗಿದೆ. ಉತ್ತರ ಬರೆಯದಿದ್ದರೂ ಉತ್ತರ ಪತ್ರಿಕೆಯಲ್ಲಿ ಐದನೇ ಆಯ್ಕೆಯನ್ನು ಕಡ್ಡಾಯವಾಗಿ ಗುರುತಿಸುವವ್ಯವಸ್ಥೆಜಾರಿಗೆತರಲಾಗುವುದು.ಪ್ರತಿಪರೀಕ್ಷಾ ಕೊಠಡಿಗೆ ಹೆಚ್ಚುವರಿಯಾಗಿ ಒಬ್ಬ ಮೇಲ್ವಿಚಾರಕರನ್ನು ನೇಮಿಸಲಾಗುವುದು.ಸಿಸಿಟಿವಿದೃಶ್ಯಾವಳಿಗಳಮೇಲೆನಿಗಾ ಇರಿಸಲು ಪ್ರತ್ಯೇಕ ವೀಕ್ಷಕರನ್ನು ನಿಯೋಜಿಸಲಾಗುವುದು ಎಂದರು.

ಸುಳ್ಳು ಆರೋಪ ಮಾಡಿದವರ ವಿರುದ್ಧವೂ ಕೇಸ್...

ವಿಎಒ ಪರೀಕ್ಷಾ ಅಕ್ರಮ ಪ್ರಕರಣದಲ್ಲಿ ಶಂಕರ ಬನ್ನೂರು ಪರೀಕ್ಷೆಗೆ ಹಾಜರಾಗಿದ್ದನೇ ಇಲ್ಲವೇ ಎಂಬುದನ್ನು ಖಚಿತಪಡಿಸಿಕೊಳ್ಳಲು ಸಿಸಿಟಿವಿ ದೃಶ್ಯಾವಳಿ, ಪರೀಕ್ಷಾರ್ಥಿಗಳ ಸಹಿ ಹಾಗೂ ಮುಖಚಹರೆ ಗುರುತಿಸುವಿಕೆ ಸೇರಿದಂತೆ ವಿವಿಧ ಸಾಕ್ಷ್ಯಗಳನ್ನು ಪರಿಶೀಲಿಸಲಾಗಿದೆ. ಸಮಗ್ರ ಪರಿಶೀಲನೆಯ ಬಳಿಕವೇ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ ಎಂದು ಜಿಲ್ಲಾಧಿಕಾರಿ ವಿಜಯಮಹಾಂತೇಶ ದಾನಮ್ಮನವರ ತಿಳಿಸಿದರು. ಶಂಕರ ಬನ್ನೂರು ಪರೀಕ್ಷೆಗೆ ಹಾಜರಾಗಿರಲಿಲ್ಲ ಎಂದು ಸಹಪರೀಕ್ಷಾರ್ಥಿ ಎಂದು ಹೇಳಿಕೊಂಡ ವ್ಯಕ್ತಿಯೊಬ್ಬರು ಸಾಮಾಜಿಕ ಜಾಲತಾಣದಲ್ಲಿ ಹೇಳಿಕೆ ನೀಡಿರುವುದು ಗಮನಕ್ಕೆ ಬಂದಿದೆ. ಈ ಸಂಬಂಧ ಆರೋಪ ಮಾಡಿದವರನ್ನು ವಿಚಾರಣೆಗೆ ಕರೆಯಲಾಗುವುದು. ಆರೋಪಕ್ಕೆ ಪೂರಕವಾದ ಸೂಕ್ತ ಸಾಕ್ಷ್ಯ ಒದಗಿಸಿದರೆ ಪರಿಶೀಲಿಸಲಾಗುವುದು. ಇಲ್ಲವಾದಲ್ಲಿ ಸುಳ್ಳು ಆರೋಪ ಮಾಡಿದವರ ವಿರುದ್ಧವೇ ಪ್ರಕರಣ ದಾಖಲಿಸಲಾಗುವುದು ಎಂದು ಎಚ್ಚರಿಸಿದರು.

ತಾಂತ್ರಿಕ ದೋಷ: ಶಿಗ್ಗಾಂವಿ ಬಳಿ ಹೊಲದಲ್ಲಿ ಲ್ಯಾಂಡ್ ಆದ ವಾಯುಪಡೆಯ ಹೆಲಿಕಾಪ್ಟರ್

6 ಸಿಬ್ಬಂದಿ ಸುರಕ್ಷಿತ; ಸೋಲೂರಿನಿಂದ ಬೆಳಗಾವಿಗೆ ತೆರಳುತ್ತಿದ್ದ ಹೆಲಿಕಾಪ್ಟರ್

ಸಮಾಲೋಚನೆ ಸುದ್ದಿ ಶಿಗ್ಗಾವಿ

ತಾಂತ್ರಿಕ ದೋಷ ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಭಾರತೀಯ ವಾಯುಪಡೆಯ ಹೆಲಿಕಾಪ್ಟರ್‌ವೊಂದು ಶಿಗ್ಗಾಂವ ತಾಲೂಕಿನ ಕಾಮನಹಳ್ಳಿ ಗ್ರಾಮದ ಬಳಿ ರಾಷ್ಟ್ರೀಯ ಹೆದ್ದಾರಿ-48ರ ಪಕ್ಕದಲ್ಲಿರುವ ರೈತರೊಬ್ಬರ ಹೊಲದಲ್ಲಿ ತುರ್ತು ಭೂಸ್ಪರ್ಶ ಮಾಡಿದ ಘಟನೆ ಬುಧವಾರ ನಡೆದಿದೆ.

ZD 4050 ನೋಂದಣಿ ಸಂಖ್ಯೆಯ ಭಾರತೀಯ ವಾಯುಪಡೆಯ ಹೆಲಿಕಾಪ್ಟರ್ ತಮಿಳುನಾಡಿನ ಸೋಲೂರಿನಿಂದ ಬೆಳಗಾವಿಗೆ ತೆರಳುತ್ತಿತ್ತು. ಮಾರ್ಗಮಧ್ಯೆ ತಾಂತ್ರಿಕ ದೋಷ ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಮುನ್ನೆಚ್ಚರಿಕೆ ಕ್ರಮವಾಗಿ ಕಾಮನಹಳ್ಳಿ ಗ್ರಾಮದ ಬಳಿ ಹೊಲದಲ್ಲಿ ಲ್ಯಾಂಡ್ ಮಾಡಲಾಗಿದೆ ಎಂದು ತಿಳಿದುಬಂದಿದೆ.

ಹೆಲಿಕಾಪ್ಟರ್‌ನಲ್ಲಿ ವಾಯುಪಡೆಯ ದೀಪಕ ಶರ್ಮಾ ಸೇರಿದಂತೆ ಒಟ್ಟು ಆರು ಸಿಬ್ಬಂದಿ ಇದ್ದರು. ಅದೃಷ್ಟವಶಾತ್ ಎಲ್ಲರೂ ಸುರಕ್ಷಿತವಾಗಿದ್ದು, ಯಾವುದೇ ಪ್ರಾಣಹಾನಿ ಅಥವಾ ಗಾಯ ಸಂಭವಿಸಿಲ್ಲ. ಘಟನೆ ತಿಳಿಯುತ್ತಿದ್ದಂತೆ ಶಿಗ್ಗಾಂವ ಪೊಲೀಸರು ಸ್ಥಳಕ್ಕೆ ಧಾವಿಸಿ ಪರಿಶೀಲನೆ ನಡೆಸಿದ್ದರು.



ಹೆಲಿಕಾಪ್ಟರ್ ದುರಸ್ತಿಗೆ ಬಂದ ವಾಯುಪಡೆ ತಾಂತ್ರಿಕ ಸಿಬ್ಬಂದಿ

ತಾಂತ್ರಿಕ ದೋಷದಿಂದ ಶಿಗ್ಗಾಂವಿ ತಾಲೂಕಿನ ಕಾಮನಹಳ್ಳಿ ಗ್ರಾಮದ ಬಳಿ ರಾಷ್ಟ್ರೀಯ ಹೆದ್ದಾರಿ-48ರ ಪಕ್ಕದ ರೈತರ ಹೊಲದಲ್ಲಿ ತುರ್ತು ಭೂಸ್ಪರ್ಶ ಮಾಡಿದ್ದ ಭಾರತೀಯ ವಾಯುಪಡೆಯ ಹೆಲಿಕಾಪ್ಟರ್‌ನ ಪರಿಶೀಲನೆ ಹಾಗೂ ದುರಸ್ತಿ ಕಾರ್ಯವನ್ನು ವಾಯುಪಡೆಯ ತಾಂತ್ರಿಕ ಸಿಬ್ಬಂದಿ ಕೈಗೊಂಡಿದ್ದಾರೆ. ಘಟನೆ ಬಳಿಕ ಸ್ಥಳಕ್ಕೆ ಆಗಮಿಸಿರುವ ವಾಯುಪಡೆಯ ತಾಂತ್ರಿಕ ಸಿಬ್ಬಂದಿ ಹೆಲಿಕಾಪ್ಟರ್‌ನ ವಿವಿಧ ಭಾಗಗಳನ್ನು ಪರಿಶೀಲಿಸಿದ್ದು, ಕಾಣಿಸಿಕೊಂಡಿರುವ ತಾಂತ್ರಿಕ ದೋಷ ಸರಿಪಡಿಸುವ ಕಾರ್ಯದಲ್ಲಿ ತೊಡಗಿದ್ದಾರೆ. ದುರಸ್ತಿ ಕಾರ್ಯ ಪೂರ್ಣಗೊಂಡ ಬಳಿಕ ಹೆಲಿಕಾಪ್ಟರ್ ಹಾರಾಟ ನಡೆಸುವ ಕುರಿತು ವಾಯುಪಡೆಯ ಅಧಿಕಾರಿಗಳು ನಿರ್ಧಾರ ಕೈಗೊಳ್ಳಲಿದ್ದಾರೆ. ಅಲ್ಲದೇ ಹೆಲಿಕಾಪ್ಟರ್ ಹೊಲದಲ್ಲಿ ಇಳಿದಿರುವುದನ್ನು ನೋಡಲು ಸುತ್ತಮುತ್ತಲಿನ ಗ್ರಾಮಸ್ಥರು ಸ್ಥಳಕ್ಕೆ ಆಗಮಿಸುತ್ತಿದ್ದಾರೆ.

ಹಾವೇರಿ ಜಿಲ್ಲೆಯ ಕಬ್ಬಿಗೂ ಟನ್‌ಗೆ 3,600 ಮೊದಲ ಕಂತು ನೀಡಿ: ಚುನಪ್ಪ ಪೂಜಾರ

ಸಮಾಲೋಚನೆ ಸುದ್ದಿ ಹಾವೇರಿ

ಉತ್ತರ ಕರ್ನಾಟಕದ ಎಲ್ಲ ಜಿಲ್ಲೆಗಳ ಕಬ್ಬು ಬೆಳೆಗಾರರಿಗೆ ತಾರತಮ್ಯ ಮಾಡದೆ ಪ್ರತಿ ಟನ್‌ಗೆ 3,600 ಮೊದಲ ಕಂತಿನ ಹಣ ನೀಡಬೇಕು. ಬೆಳಗಾವಿ ಭಾಗದ ರೈತರಿಗೆ ನೀಡುವ ದರವನ್ನೇ ಹಾವೇರಿ ಜಿಲ್ಲೆಯ ರೈತರಿಗೂ ಅನ್ವಯಿಸಬೇಕು ಎಂದು ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಚುನಪ್ಪ ಪೂಜಾರ ಆಗ್ರಹಿಸಿದರು.

ನಗರದ ಜಿಲ್ಲಾಡಳಿತ ಭವನದ ಎದುರು ನಡೆದ ಕಬ್ಬು ಬೆಳೆಗಾರರ ಸಭೆಯಲ್ಲಿ ಮಾತನಾಡಿದ ಅವರು, ಕಬ್ಬಿಗೆ ಕಾರ್ಖಾನೆಗಳಿಂದ 4,500 ಹಾಗೂ ಸರ್ಕಾರದಿಂದ 1,000 ಸೇರಿ ಒಟ್ಟು 5,500 ನೀಡಬೇಕೆಂಬ ಬೇಡಿಕೆಯೊಂದಿಗೆ ಹೋರಾಟ ನಡೆಸಲಾಗುತ್ತಿದೆ. ಎಂಎಸ್‌ಪಿ ದರ ಹೆಚ್ಚಳ ಹಾಗೂ ಎಥೆನಾಲ್ ಸೇರಿದಂತೆ ಕಬ್ಬಿನ ಉಪ ಉತ್ಪನ್ನಗಳ ವಾಣಿಜ್ಯ ಮೌಲ್ಯವನ್ನು ಪರಿಗಣಿಸಿ ರೈತರಿಗೆ ನ್ಯಾಯಯುತ ಬೆಲೆ ನೀಡಬೇಕು. ಜಿಲ್ಲೆಯ ಹಲವು ಭಾಗಗಳಲ್ಲಿ ಕಬ್ಬು ಒಣಗುತ್ತಿದ್ದರೂ ರೈತರ ಸಮಸ್ಯೆಗಳಿಗೆ ಸೂಕ್ತ ಸ್ಪಂದನೆ ದೊರೆಯುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಹಾವೇರಿ ಜಿಲ್ಲೆಯ ಕೆಲವು ಸಕ್ಕರೆ ಕಾರ್ಖಾನೆಗಳು ಪ್ರತಿ ಟನ್‌ಗೆ 2,950 ಹಾಗೂ ಮತ್ತೊಂದು ಕಾರ್ಖಾನೆ 3,100 ನೀಡುವುದಾಗಿ ಹೇಳುತ್ತಿವೆ. ಬೆಳಗಾವಿ ಭಾಗದಲ್ಲಿ ಶೇ.12.50 ರಿಕವರಿ ದೊರೆಯುತ್ತಿದ್ದರೆ, ಹಾವೇರಿ ಭಾಗದಲ್ಲಿಯೂ ಕಬ್ಬು ಬೆಳೆಯಲು ಸಮಾನ ವೆಚ್ಚವಾಗುತ್ತದೆ. ರಿಕವರಿ ನಿರ್ಧಾರದಲ್ಲಿ ಪಾರದರ್ಶಕತೆ ಇರಬೇಕು. ಹೀಗಾಗಿ ಸರ್ಕಾರ ಎಲ್ಲ ಕಾರ್ಖಾನೆಗಳಲ್ಲೂ ರಿಕವರಿ ಪರಿಶೀಲನಾ ಯಂತ್ರ ಅಳವಡಿಸಲು ಕ್ರಮ ಕೈಗೊಳ್ಳಬೇಕು. ಈ ಕುರಿತು ಸಕ್ಕರೆ ಸಚಿವ ರುದ್ರಪ್ಪ ಲಮಾಣಿ ಹಾಗೂ ಮುಖ್ಯಮಂತ್ರಿಗಳು ಗಮನಹರಿಸಬೇಕು ಎಂದು ಒತ್ತಾಯಿಸಿದರು.

ಜಿಎಂ ಸಿದ್ದೇಶ್ವರ ಹಾಗೂ ಶಿವರಾಮ ಹೆಬ್ಬಾರ್ ಶುಗರ್ಸ್ ಮಾಲೀಕರು ರೈತರ ಮೇಲೆ ದಾಖಲಿಸಿರುವ ಪ್ರಕರಣಗಳನ್ನು ಕಾರ್ಖಾನೆಗಳು ಆರಂಭವಾಗುವ ಮುನ್ನವೇ ಹಿಂಪಡೆಯಬೇಕು. ಇಲ್ಲವಾದರೆ ಕಾರ್ಖಾನೆ ಬಂದ್ ಮಾಡುವ ಹೋರಾಟಕ್ಕೆ ಮುಂದಾಗಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು. ಶಶಿಕಾಂತ್‌ಗುರೂಜಿಮಾತನಾಡಿ,ಉತ್ತರಕರ್ನಾಟಕದ ಎಲ್ಲ ಜಿಲ್ಲೆಗಳ ರೈತರಿಗೆ ಒಂದೇ ದರ ನೀಡಬೇಕು. ರೈತರ ಹೋರಾಟ ನಡೆಯುತ್ತಿದ್ದರೂ ಸಕ್ಕರೆ ಸಚಿವರು ಸ್ಥಳಕ್ಕೆ ಆಗಮಿಸಿ ಸಮಸ್ಯೆ ಆಲಿಸದಿರುವುದು ಬೇಸರದ ಸಂಗತಿ. ಬೆಳಗಾವಿ ಭಾಗದ ದರವನ್ನು ಹಾವೇರಿ ರೈತರಿಗೆ ನೀಡದಿದ್ದರೆ ಜಿಲ್ಲಾ ಉಸ್ತುವಾರಿ ಸಚಿವರು ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿದರು.

3,600 ದರಕ್ಕೆ ಒಪ್ಪಿಕೊಂಡಿದ್ದಾರೆ ಎಂಬ ಆರೋಪದಲ್ಲಿ ಸತ್ಯಾಂಶವಿಲ್ಲ.ಆಹಣರೈತರಖಾತೆಗೆಜಮೆಯಾಗಬೇಕೇ ಹೊರತು ನಮ್ಮ ಖಾತೆಗಲ್ಲ. ರೈತರ ಹಿತ ಕಾಯಲು ಜಿಲ್ಲೆಯ ಎಲ್ಲ ಶಾಸಕರು ಧ್ವನಿ ಎತ್ತಬೇಕು. ಮುಂದಿನ ವರ್ಷ ಕಬ್ಬಿನ ದರ ನಿಗದಿಪಡಿಸುವಾಗ ಗುರ್ಲಾಪುರ ಮಾದರಿಯ ಘೋಷಣೆಯಂತೆ ಹಾವೇರಿ ಜಿಲ್ಲೆಯ ರೈತರಿಗೆ ಒಂದು ರೂಪಾಯಿಯೂ ಕಡಿಮೆ ಆಗದಂತೆ ಸಮಾನ ದರ ನೀಡಬೇಕು ಎಂದು ಒತ್ತಾಯಿಸಿದರು.

ಸಭೆಯಲ್ಲಿ ಮಾಜಿ ಶಾಸಕ ವಿರೂಪಾಕ್ಷಪ್ಪ ಬಳ್ಳಾರಿ, ಕಬ್ಬು ಬೆಳೆಗಾರರಸಂಘದಜಿಲ್ಲಾಧ್ಯಕ್ಷಭುವನೇಶ್ವರಶಿಡ್ಲಾಪುರ, ರೈತ ಸಂಘದ ಜಿಲ್ಲಾಧ್ಯಕ್ಷ ಹನುಮಂತಪ್ಪ ಹುಚ್ಚಣ್ಣನವರ, ಕಬ್ಬು ಬೆಳೆಗಾರರ ಕ್ಷೇಮಾಭಿವೃದ್ಧಿ ಸಂಘದ ಜಿಲ್ಲಾಧ್ಯಕ್ಷ ಅಶೋಕರೆಡ್ಡಿ ಮಾರ್ಚರೆಡ್ಡರ್ ಸೇರಿದಂತೆ ಅನೇಕ ರೈತ ಮುಖಂಡರು ಉಪಸ್ಥಿತರಿದ್ದರು.



ಚುನಾವಣಾ ಮಟ್ಟದ ಶಿಷ್ಟಾಚಾರಗಳೊಂದಿಗೆ ಕೆಪಿಎಸ್‌ಸಿ ಪರೀಕ್ಷೆ; ಡಿಕೆಶಿ

ಬೆಂಗಳೂರು:ಕರ್ನಾಟಕಲೋಕಸೇವಾಆಯೋಗನವೆಂಬರ್ 15 ರ ಭಾನುವಾರ 319 ಗೆಜೆಟೆಡ್ ಪ್ರೊಬೇಷನರ್ ಹುದ್ದೆಗಳಿಗೆ ಪೂರ್ವಭಾವಿ ಪರೀಕ್ಷೆಯನ್ನುನಡೆಸಲಿದ್ದು, ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಗುರುವಾರ ಉಪ ಆಯುಕ್ತರಿಗೆ ಚುನಾವಣಾ ಮಟ್ಟದ ಶಿಷ್ಟಾಚಾರಗಳೊಂದಿಗೆ ಪರೀಕ್ಷೆಗಳನ್ನು ನಡೆಸುವಂತೆ ನಿರ್ದೇಶನ ನೀಡಿದ್ದಾರೆ.

ಕರ್ನಾಟಕ ಮುಖ್ಯಮಂತ್ರಿಗಳು ತಮ್ಮ ಗೃಹ ಕಚೇರಿ 'ಕೃಷ್ಣ'ದಿಂದ ಉಪಆಯುಕ್ತರುಮತ್ತುಪೊಲೀಸ್ ವರಿಷ್ಠಾಧಿಕಾರಿಗಳೊಂದಿಗೆ ವೀಡಿಯೊಕಾನ್ಫರೆನ್ಸ್‌ಮೂಲಕಸಿದ್ಧತೆಗಳನ್ನುಪರಿಶೀಲಿಸಿದರು ಮತ್ತು ಎಲ್ಲಾ ಪರೀಕ್ಷಾ ಸಿಬ್ಬಂದಿಗೆ ಚುನಾವಣಾ ಕರ್ತವ್ಯ ಮತ್ತು ಅನುಸರಣಾ ವರದಿಗಳ ಸಲ್ಲಿಕೆಯ ಮಾದರಿಯಲ್ಲಿ ತರಬೇತಿ ನೀಡಲು ಆದೇಶಿಸಿದರು.

ಪರೀಕ್ಷೆಯನ್ನು ಅತ್ಯಂತ ಪಾರದರ್ಶಕತೆಯಿಂದ ನಡೆಸಬೇಕು ಮತ್ತು ದುಷ್ಕೃತ್ಯಕ್ಕೆ ಯಾವುದೇ ಅವಕಾಶವಿಲ್ಲ ಎಂದು ಸಿಎಂ ಹೇಳಿದರು. ಕೆಪಿಎಸ್‌ಸಿ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲು ಮತ್ತು ಎಲ್ಲಾ ಕೇಂದ್ರಗಳಲ್ಲಿ ಸಿಸಿಟಿವಿ ಮೂಲಕ ನಿರಂತರ ಕಣ್ಗಾವಲು ಕಾಯ್ದುಕೊಳ್ಳಲು ಅವರು ಜಿಲ್ಲಾಧಿಕಾರಿಗಳಿಗೆ ಸೂಚಿಸಿದರು.

ಪೊಲೀಸ್ ನೇಮಕಾತಿ ಪರೀಕ್ಷೆಗಳಿಗೆ ಹೋಲುವ ಬಲವಾದ ಭದ್ರತಾ ವ್ಯವಸ್ಥೆಗಳನ್ನು ಜಾರಿಗೆ ತರಲು ಡಿಕೆ ಶಿವಕುಮಾರ್ ಪೊಲೀಸರಿಗೆ ನಿರ್ದೇಶನ ನೀಡಿದರು, ಯಾವುದೇ ಅನಧಿಕೃತ ವ್ಯಕ್ತಿಯನ್ನು ಪರೀಕ್ಷಾ ಕೇಂದ್ರದ ಆವರಣದೊಳಗೆ ಅನುಮತಿಸಲಾಗುವುದಿಲ್ಲ ಮತ್ತು ಅಧಿಕೃತ ಸಿಬ್ಬಂದಿಯನ್ನು ಸಹ ಭದ್ರತಾ ತಪಾಸಣೆಗೆ ಒಳಪಡಿಸಬೇಕು ಎಂದು ಒತ್ತಿ ಹೇಳಿದರು. ಅಭ್ಯರ್ಥಿಗಳು ಮಾರ್ಗಸೂಚಿಗಳ ಅಡಿಯಲ್ಲಿ ಅನುಮತಿಸಲಾದವಸ್ತುಗಳನ್ನುಮಾತ್ರಕೊಂಡೊಯ್ಯಬಹುದು. ಏತನ್ಮಧ್ಯೆ,ಪ್ರತಿಕೇಂದ್ರದಸೂಕ್ಷ್ಮತೆಯನ್ನುನಿರ್ಣಯಿಸಲುಮತ್ತು ಅದಕ್ಕೆ ಅನುಗುಣವಾಗಿ ಸಿಬ್ಬಂದಿಯನ್ನು ನಿಯೋಜಿಸಲು ಅಧಿಕಾರಿಗಳಿಗೆ ಸೂಚಿಸಲಾಯಿತು. ಬಾಡಿಗೆ ಆಧಾರದ ಮೇಲೆ ಹೆಚ್ಚುವರಿ ಭದ್ರತಾ ಸಾಧನಗಳನ್ನು ನೇಮಿಸಿಕೊಳ್ಳಬಹುದು ಮತ್ತು ಅಗತ್ಯವಿದ್ದರೆ ಹೆಚ್ಚುವರಿ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಬಹುದು.

ಯಾವುದೇ ಸಂದರ್ಭಗಳಲ್ಲಿಯೂ ಅಭ್ಯರ್ಥಿಗಳು ಮೊಬೈಲ್ ಫೋನ್‌ಗಳೊಂದಿಗೆ ಕೇಂದ್ರಗಳಿಗೆ ಪ್ರವೇಶಿಸಬಾರದು ಮತ್ತು ಯಾವುದೇ ಲೋಪಕ್ಕೆ ಹಿರಿಯ ಅಧಿಕಾರಿಗಳನ್ನು ಹೊಣೆಗಾರರನ್ನಾಗಿ ಮಾಡಲಾಗುತ್ತದೆ ಎಂದು ಮುಖ್ಯಮಂತ್ರಿ ಎಚ್ಚರಿಸಿದರು.

ಆದಾಗ್ಯೂ, ಮೊದಲ ಬಾರಿಗೆ, ಪ್ರತಿ ಪರೀಕ್ಷಾ ಹಾಲ್‌ನಲ್ಲಿ ಇಬ್ಬರು ಮೇಲ್ವಿಚಾರಕರನ್ನು ನಿಯೋಜಿಸಲಾಗುವುದು ಮತ್ತು ಕನಿಷ್ಠ ಒಬ್ಬರು ಸರ್ಕಾರಿ ಕಾಲೇಜಿನವರಾಗ

ಸಮಾಲೋಚನೆ ಸುದ್ದಿ
ಕನ್ನಡ ದಿನ ಪತ್ರಿಕೆ
SAMALOCHANE RANEBENNURSUDDI
Kannada Daily Morning

ಕಾಡುಹಂದಿ ಬೇಟೆಯಾಡಿ ಸುಟ್ಟು ಮಾಂಸ ಮಾರಾಟ ಮಾಡಲು ಯತ್ನ

ಹಾವೇರಿ: ಸ್ಥಳೀಯ ನಾಗೇಂದ್ರನಮಟ್ಟಿ ವ್ಯಾಪ್ತಿಯಲ್ಲಿ ಕಾಡುಹಂದಿಯನ್ನು ಬೇಟೆಯಾಡಿ ಸುಟ್ಟು ಮಾಂಸ ಮಾರಾಟ ಮಾಡಲು ಯತ್ನಿಸಿದ ಪ್ರಕರಣವನ್ನು ಅರಣ್ಯ ಇಲಾಖೆ ಅಧಿಕಾರಿಗಳು ಪತ್ತೆಹಚ್ಚಿದ್ದು, ಒಬ್ಬ ಆರೋಪಿಯನ್ನು ಬಂಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಹಾವೇರಿ ಪ್ರಾದೇಶಿಕ ವಲಯದ ಅರಣ್ಯಾಕಾರಿಗಳು ನೆಡುತೋಪು ತಪಾಸಣೆಗಾಗಿ ನಾಗೇಂದ್ರನಮಟ್ಟಿಯಿಂದ ಕರ್ಜಗಿ ಕಡೆಗೆ ತೆರಳುತ್ತಿದ್ದಾಗ, ರಸ್ತೆಯ ಬಲಭಾಗದ ಖಾಲಿ ಜಾಗದಲ್ಲಿದ್ದ ಜಾಲಿ ಗಿಡಗಳಲ್ಲಿ ಬೆಂಕಿ ಕಾಣಿಸಿಕೊಂಡಿರುವುದು ಗಮನಕ್ಕೆ ಬಂದಿದೆ. ಅನುಮಾನಗೊಂಡು ಪರಿಶೀಲಿಸಿದಾಗ ಅಲ್ಲಿ ಕಾಡುಹಂದಿಯನ್ನು ಸುಡುತ್ತಿರುವುದು ಪತ್ತೆಯಾಗಿದೆ.

ಸ್ಥಳೀಯರನ್ನು ವಿಚಾರಿಸಿದಾಗ ಕಾಡುಹಂದಿಯನ್ನು ಬೇಟೆಯಾಡಿ ಸುಟ್ಟು ಮಾಂಸ ಮಾರಾಟ ಮಾಡಲು ಯತ್ನಿಸುತ್ತಿರುವುದು ತಿಳಿದುಬಂದಿದೆ. ಬಳಿಕ ಸುತ್ತಮುತ್ತ ಪರಿಶೀಲಿಸಿದಾಗ ಮತ್ತೊಂದು ಜೀವಂತ ಕಾಡುಹಂದಿಯನ್ನು ಸೆರೆಹಿಡಿದು ಕಾಲುಗಳನ್ನು ಕಟ್ಟಿ ಇಟ್ಟಿರುವುದು ಪತ್ತೆಯಾಗಿದೆ. ಕಾರ್ಯಾಚರಣೆ ನಡೆಸಿದ ಅರಣ್ಯ ಇಲಾಖೆ ಸಿಬ್ಬಂದಿ ನಾಗೇಂದ್ರನಮಟ್ಟಿಯ ಅಜ್ಜಪ್ಪ ಪರಸಪ್ಪ ಕುಂಚಿಕೊರವರ (29) ಎಂಬ ಆರೋಪಿತನನ್ನು ಸ್ಥಳದಲ್ಲಿಯೇ ಬಂಸಿದ್ದಾರೆ. ಸ್ಥಳದಿಂದ ಒಂದು ಸುಟ್ಟ ಕಾಡುಹಂದಿ, ಒಂದು ಜೀವಂತ ಕಾಡುಹಂದಿ ಹಾಗೂ ಬೇಟೆಗೆ ಬಳಸಿದ ಆಯುಧಗಳನ್ನು ವಶಪಡಿಸಿಕೊಂಡಿದ್ದಾರೆ.

ನ್ಯಾಯಾಲಯದಅನುಮತಿಯಂತೆಸುಟ್ಟಕಾಡುಹಂದಿಯನ್ನು ನಿಯಮಾನುಸಾರ ವಿಲೇವಾರಿ ಮಾಡಲಾಗಿದೆ. ಜೀವಂತ ಕಾಡುಹಂದಿಯನ್ನು ವೈದ್ಯಕೀಯ ತಪಾಸಣೆಗೆ ಒಳಪಡಿಸಿ ಅರಣ್ಯ ಪ್ರದೇಶಕ್ಕೆ ಬಿಡಲಾಗಿದೆ. ವನ್ಯಜೀವಿ ಸಂರಕ್ಷಣಾ ಕಾಯ್ದೆ 1972ರ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದ್ದು, ತನಿಖೆ ಮುಂದುವರಿದಿದೆ.

ಉಪ ಅರಣ್ಯ ಸಂರಕ್ಷಣಾಕಾರಿ ಅಕ್ಷಯ್ ಪ್ರಕಾಶಕರ ಹಾಗೂ ಸಹಾಯಕ ಅರಣ್ಯ ಸಂರಕ್ಷಣಾಕಾರಿ ಅನುಷಾ ಮಾರ್ಗದರ್ಶನದಲ್ಲಿ ವಲಯ ಅರಣ್ಯಾಕಾರಿ ಸಿದ್ದಮ್ಮ ಕರಿಗಾರ, ಉಪವಲಯ ಅರಣ್ಯಾಕಾರಿಗಳಾದ ಮಂಜುನಾಥ ಹಂಡೇರ, ಫಕ್ಕೀರೇಶ ಮಾಗಡಿ, ಎ.ಎಂ. ನದಾಫ್, ರೇಹಮತ್ ಹಾಗೂ ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.



ಕಾಂಗ್ರೆಸ್ ಕಾರ್ಯಕರ್ತನಿಗೆ ಪಕ್ಷದ ಮನ್ನಣೆ; ಆಶ್ರಯ ಸಮಿತಿ ಕಚೇರಿಯಲ್ಲಿ ಸನ್ಮಾನ

ದುರ್ಗೇಶ ಗೋಣೆಮ್ಮನವರಗೆ ನಿಗಮ ಮಂಡಳಿ ನಿರ್ದೇಶಕ ಸ್ಥಾನ

ಸಮಾಲೋಚನೆ ಸುದ್ದಿ ಬ್ಯಾಡಗಿ

ಕರ್ನಾಟಕ ರಾಜ್ಯ ಆದಿ ಜಾಂಬವ ಅಭಿವೃದ್ಧಿ ನಿಗಮ ಮಂಡಳಿಯ ನಿರ್ದೇಶಕರಾಗಿ ಆಯ್ಕೆಯಾದ ಪಟ್ಟಣದ ಗಾಂಧಿನಗರ ನಿವಾ ಸಿ, ಪುರಸಭೆ ಮಾಜಿ ಸದಸ್ಯ ಹಾಗೂ ಹಾಲಿ ಆಶ್ರಯ ಸಮಿತಿ ಸದಸ್ಯ, ಕಾಂಗ್ರೆಸ್ ಮುಖಂಡ ದುರ್ಗೇಶ ಗೋಣೆಮ್ಮನವರ ಅವ ರನ್ನ ಪಟ್ಟಣದ ಆಶ್ರಯ ಸಮಿತಿ ಕಚೇರಿಯಲ್ಲಿ ಆಶ್ರಯ ಸಮಿತಿ ಸದಸ್ಯರು ಹಾಗೂ ಕಾಂಗ್ರೆಸ್ ಮುಖಂಡರು ಸನ್ಮಾನಿಸಿ ಗೌರ ವಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಆಶ್ರಯ ಸಮಿತಿ ಅಧ್ಯಕ್ಷ ಅಬ್ದುಲ್ ಮುನಾಫ್ ಯರೇಶಿಮಿ, ಕಾಂಗ್ರೆಸ್ ಪಕ್ಷವು ಪಕ್ಷದ ಸಂಘಟ ನೆಗಾಗಿ ಶ್ರಮಿಸಿದ ನಿಷ್ಠಾವಂತ ಕಾರ್ಯಕರ್ತರನ್ನು ಗುರುತಿಸಿ, ಅವರಿಗೆ ಸೂಕ್ತ ಸ್ಥಾನಮಾನ ಹಾಗೂ ಜವಾಬ್ದಾರಿಗಳನ್ನು ನೀಡುವ ಮೂಲಕ ಗೌರವಿಸುತ್ತಿದೆ. ಕಳೆದ 30 ವರ್ಷಗಳಿಂದ ದುರ್ಗೇಶ ಗೋಣೆಮ್ಮನವರ ಕಾಂಗ್ರೆಸ್ ಪಕ್ಷದ ಸಂಘಟನೆ ಸೇರಿದಂತೆ ವಿವಿಧ ಸಾಮಾಜಿಕ ಹಾಗೂ ರಾಜಕೀಯ ಚಟುವಟಿಕೆಗಳಲ್ಲಿ ನಿರಂತರವಾಗಿ ತೊಡಗಿಸಿಕೊಂಡು ಪಕ್ಷದ ಬೆಳವಣಿಗೆಗೆ ಶ್ರಮಿಸಿದ್ದಾರೆ. ಅವರ ದೀರ್ಘಕಾಲದ ಪಕ್ಷದ ಸೇವೆಯನ್ನು ಗುರುತಿಸಿ ಸರಕಾರ ನಿಗಮ ಮಂಡಳಿಯ ನಿರ್ದೇಶಕ ಸ್ಥಾನ ನೀಡಿರುವುದು ಸಂತಸದ ಸಂಗ ತಿಯಾಗಿದೆ ಎಂದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ದುರ್ಗೇಶ ಗೋಣೆಮ್ಮನವರ ಪಕ್ಷದ ಸಾಮಾನ್ಯ ಕಾರ್ಯಕರ್ತನಾಗಿ ನಾನು ನನ್ನ ರಾಜಿಜಕೀಯ ಜೀವನ ಆರಂಭಿಸಿದ್ದೆ, ವಿವಿಧ ಹಂತಗಳಲ್ಲಿ ಪಕ್ಷದ ಸಂಘಟನೆಗೆ ಕೊಡುಗೆ ನೀಡಿದವರಿಗೆ ಇಂತಹ ಅವಕಾಶಗಳು ದೊರೆಯು ತ್ತಿರುವುದು ನನ್ನಂತೆ ಇತರ ಕಾರ್ಯಕರ್ತರಲ್ಲಿಯೂ ಹೊಸ ಉತ್ಸಾಹ ಮತ್ತು ಆತ್ಮವಿಶ್ವಾಸ ಮೂಡಿಸಿದೆ. ಪಕ್ಷದ ಕಾರ್ಯಕರ್ತರ ಶ್ರಮಕ್ಕೆ ತಕ್ಕ ಗೌರವ ದೊರೆಯುತ್ತಿರುವುದು ಸಂಘಟನೆಯನ್ನು ಮತ್ತಷ್ಟು ಬಲಪಡಿಸಲು ಸಹಕಾರಿಯಾಗಲಿದೆ ಎಂದರಲ್ಲದೇ ನನ್ನನ್ನ ಗುರುತಿಸಿ ಜವಾಬ್ದಾರಿ ನೀಡಿದ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ, ಶಾಸಕ ಬಸವರಾಜ ಶಿವಣ್ಣನವರ ಸೇರಿದಂತೆ ಜಿಲ್ಲಾಧ್ಯಕ್ಷ ಸಂಜೀವಕುಮಾರ ನೀರಲಗಿ ಹಾಗೂ ಪಕ್ಷದ ಎಲ್ಲಾ ನಾಯಕರಿಗೆ ಕಾಂಗ್ರೆಸ್ ಪಕ್ಷದ ಮುಖಂಡರಿಗೆ ಕೃತಜ್ಞತೆ ಸಲ್ಲಿಸಿದರು. ಮತ್ತು ಈ ಜವಾಬ್ದಾರಿ ನೀಡಿದ ರಾಜ್ಯ ಸರಕಾರ ಹಾಗೂ ಪಕ್ಷದ ಆಶಯಗಳಿಗೆ ಅನುಗುಣವಾಗಿ ಹಾಗೂ ಸರಕಾರದ ಮಾರ್ಗ ಸೂಚಿಯಂತೆ ನಿಗಮದ ಜವಾಬ್ದಾರಿಗಳನ್ನು ಸಮರ್ಥವಾಗಿ ನಿರ್ವಹಿಸಲು ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ತಿಳಿಸಿದರು.

ಈ ಸಂದರ್ಭದಲ್ಲಿ ಆಶ್ರಯ ಸಮಿತಿ ಸದಸ್ಯರಾದ ಮಜೀದ ಮುಲ್ಲಾ, ಗಿರೀಶ ಇಂಡಿಮಠ, ಹನುಮಂತ ಬೊಮ್ಮಲಾಪುರ, ಖಾದರ ಸಾಬ ದೊಡ್ಡಮನಿ, ರಫೀಕ ಮುದುಗಲ್, ಮಂಜೂರ ಹಕೀಮ್, ಜೈಭೀಮ ರಾರಾವಿ, ಶ್ರೀನಿವಾಸ ಕುರಕುಂದಿ, ಸೇರಿದಂತೆ ಕಾಂ ಗ್ರೆಸ್ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.



ಫ್ಲೋರೈಡ್ ನೀರು ಸೇವನೆಯಿಂದ ಆರೋಗ್ಯದ ಮೇಲೆ ದುಷ್ಪರಿಣಾಮ

ಬ್ಯಾಡಗಿ: ಫ್ಲೋರೈಡ್ ಅಂಶಯುಕ್ತ ನೀರನ್ನು ಸೇವಿಸುವುದರಿಂದ ಆರೋಗ್ಯದಮೇಲೆದುಷ್ಪರಿಣಾಮ ಉಂಟಾಗುವ ಸಾಧ್ಯತೆಗಳಿವೆ. ಆದ್ದರಿಂದ ಗ್ರಾಮಸ್ಥರು ಅಶುದ್ಧ ನೀರನ್ನು ಕುಡಿಯುವುದನ್ನು ತಪ್ಪಿಸಿ, ಶುದ್ಧ ಕುಡಿಯುವ ನೀರನ್ನು ಬಳಕೆ ಮಾಡುವ ಮೂಲಕ ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು ಎಂದು ಶಾಸಕ ಬಸವರಾಜ ಶಿವಣ್ಣನವರ ಹೇಳಿದರು.

ತಾಲೂಕಿನ ಜೋಯಿಸರಹರಳಹಳ್ಳಿ ಗ್ರಾಮದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಹಾಗೂ ಗ್ರಾಮ ಪಂಚಾಯಿತಿ ಸಹಯೋಗದಲ್ಲಿ ಸ್ಥಾಪಿಸಲಾದ ಶುದ್ಧ ಗಂಗಾ ಕುಡಿಯುವ ನೀರಿನ ಘಟಕಕ್ಕೆ ಚಾಲನೆ ನೀಡಿ ಮಾತನಾಡಿದರು.

ಪ್ರತಿಯೊಬ್ಬರಿಗೂ ಶುದ್ಧ ಕುಡಿಯುವ ನೀರು ಅತ್ಯವಶ್ಯಕವಾಗಿದ್ದು, ಗ್ರಾಮದ ಎಲ್ಲ ಕುಟುಂಬಗಳು ಈ ಘಟಕದ ಸದುಪಯೋಗ ಪಡೆದುಕೊಳ್ಳಬೇಕು ಜೊತೆಗೆ ಶುದ್ಧ ಕುಡಿಯುವ ನೀರಿನ ಘಟಕದ ಸುತ್ತಮುತ್ತಲೂ ಸ್ವಚ್ಛತೆ ಕಾಪಾಡಿಕೊಳ್ಳಬೇಕು ಎಂದರು.

ಗ್ರಾಮೀಣ ಜನರ ಅನುಕೂಲಕ್ಕಾಗಿ ಇಂತಹ ಹಲವಾರು ಜನೋಪಯೋಗಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿರುವ ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆ ಅವರ ಕಾರ್ಯವೈಖರಿ ನಿಜಕ್ಕೂ ಶ್ಲಾಘನೀಯ ಅವರ ಯೋಜನೆಯ ಸೇವೆಗೆ ನಿಜಕ್ಕೂನಾವು ಕೃತಜ್ಞತೆ ಸಲ್ಲಿಸಲೇಬೇಕು ಎಂದು ಯೋಜನೆಯ ಕಾರ್ಯಕ್ಕೆ ಶುಭ ಹಾರೈಸಿದರು.

ಈ ಸಂದರ್ಭದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ವತಿಯಿಂದ ತಾಲೂಕಿನಲ್ಲಿ ಅನುಷ್ಠಾನಗೊಳ್ಳುತ್ತಿರುವ ವಿವಿಧ ಸಮುದಾಯ ಅಭಿವೃದ್ಧಿ ಕಾರ್ಯಕ್ರಮಗಳ ಕುರಿತು ತಾಲೂಕು ಯೋಜನಾಧಿಕಾರಿ ಮಹಾದೇವ ನಾಯಕ್ ಮಾಹಿತಿ ನೀಡಿದರು.

ಶುದ್ಧ ಗಂಗಾ ಯೋಜನೆಯ ಕಾರ್ಯವೈಖರಿ ಹಾಗೂ ಘಟಕದ ಕಾರ್ಯಕ್ಷಮತೆಯ ಕುರಿತು ಯೋಜನಾಧಿಕಾರಿ ಫಕ್ಕೀರಪ್ಪ ಬೆಲ್ಲಾಮುದ್ದಿ ವಿವರಿಸಿದರು. ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಪ್ರವೀಣ್ ಕುಮಾರ, ಗ್ರಾಮದ ಗಣ್ಯರಾದ ಬಸವರಾಜ, ಶಂಕರ ಚಕ್ರಶಾಲಿ, ಶುದ್ಧ ಗಂಗಾ ವಿಭಾಗದ ಲೆಕ್ಕಪರಿಶೋಧಕ ಶಶಿಕಿರಣ್, ಮೇಲ್ವಿಚಾರಕರಾದ ಸುರೇಶ, ಮಂಜುನಾಥ, ಸೇವಾಪ್ರತಿನಿಧಿ, ಗ್ರಾಮಸ್ಥರು ಹಾಗೂ ಸ್ವಸಹಾಯ ಸಂಘಗಳ ಸದಸ್ಯರು ಉಪಸ್ಥಿತರಿದ್ದರು.



ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಿಗೆ ಸನ್ಮಾನ

ಹರಿಹರ : ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾದ ಪತ್ರಕರ್ತ ಶೇಖರಗೌಡ ಪಾಟೀಲ್ ಹಾಗೂ ಕರ್ನಾಟಕ ರಕ್ಷಣಾ ವೇದಿಕೆ (ಪ್ರವೀಣ್ ಶೆಟ್ಟಿ ಬಣ) ಹರಿಹರ ತಾಲೂಕು ಅಧ್ಯಕ್ಷ ರಮೇಶ್ ಮಾನೆ ಅವರನ್ನು ನಗರದ ಪ್ರವಾಸಿ ಮಂದಿರದಲ್ಲಿ ವಿವಿಧ ಸಂಘಟನೆಗಳ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಆತ್ಮೀಯವಾಗಿ ಸನ್ಮಾನಿಸಿ ಅಭಿನಂದಿಸಿದರು.

ಪತ್ರಕರ್ತ ಚಿದಾನಂದ ಕಂಚಿಕೇರಿ, ಕಸಾಪ ಕಾರ್ಯದರ್ಶಿ ರೇವಣ್ಣ ನಾಯ್ಕ್, ಕರವೇ ನಗರ ಅಧ್ಯಕ್ಷ ಪ್ರೀತಮ್ ಬಾಬು, ವಿಜಯಕುಮಾರ್, ಆನಂದ್ ಹಾಗೂ ಇಲಿಯಾಜ್ ಅಹಮದ್ ಅವರು ಪ್ರಶಸ್ತಿ ಪುರಸ್ಕೃತರನ್ನು ಅಭಿನಂದಿಸಿ, ಮುಂದಿನ ದಿನಗಳಲ್ಲಿಯೂ ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವಂತೆ ಶುಭ ಹಾರೈಸಿದರು.

ಈ ಸಂದರ್ಭದಲ್ಲಿ ಕನ್ನಡಪರ ಸಂಘಟನೆಗಳ ಹೋರಾಟಗಾರರಾದ ಗೋವಿಂದ, ರಾಜೇಶ್, ಅಮನುಲ್ಲಾ, ಶೇಷಿನಾಯ್ಕ್, ಇಮ್ತಿಯಾಜ್ ಜಲಾಲ್, ಗಣೇಶ್, ಕೊಟ್ರೇಶ್, ಅಲಿ ಅಕ್ಬರ್, ಶಂಕರ್, ಸಿದ್ದಪ್ಪ, ದುರ್ಗೋಜಿ, ಯಮನೂರ, ವಿಜಯ್ ಪ್ರಭಾಸ್ ಅದ್ವಾನಿ, ಶೇಕ್ ಅಲ್ತಾಫ್, ಭಾಗ್ಯದೇವಿ, ಸುರೇಶ್ ತುಂಬಿಗೇರಿ, ರುದ್ರಗೌಡ, ಬಸವರಾಜ್, ಬಸವಲಿಂಗಪ್ಪ ಸೇರಿದಂತೆ ಹಲವು ಸಂಘಟನೆಗಳ ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.



ಹಿರೇಹಂದಿಗೋಳ ಶಾಲಾ ಮಕ್ಕಳಿಗೆ ಕುಷ್ಠರೋಗದ ಜಾಗೃತಿ

ಗದಗ: ಕುಷ್ಠ ರೋಗಿಗಳು ಶಾಪಗ್ರಸ್ತರಲ್ಲ ಮತ್ತು ಕಳಂಕಿತರಲ್ಲ ಕುಷ್ಠ ರೋಗಿಗಳನ್ನ ಸಮಾಜದಲ್ಲಿಯಾವುದೇತಾರತಮ್ಯಮಾಡದೆಗೌರಯುತವಾಗಿಕಾಣಬೇಕೆಂದು ಉಪ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಎಸ್ ಡಿ ಬೆನ್ನೂರ ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಗದಗ ತಾಲೂಕಿನ ಹಿರೇಹಂದಿಗೋಳ ಗ್ರಾಮದ ಸರಕಾರಿ ಪ್ರೌಢ ಶಾಲೆಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,ಜಿಲ್ಲಾ ಐ ಇ ಸಿ ವಿಭಾಗ ಹಾಗೂ ಆಯುಷ್ಮಾನ್ ಆರೋಗ್ಯ ಕೇಂದ್ರ ಹುಲಕೋಟಿ ಇವರ ವತಿಯಿಂದ ಆಯೋಜಿಸಿದ್ದ ಕುಷ್ಠರೋಗದ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು

ಕುಷ್ಠ ರೋಗವು ಮುಖ್ಯವಾಗಿ ಮೈಕೋ ಬ್ಯಾಕ್ಟೀರಿಯಂ ಲೆಪ್ರೆ ಎಂಬ ರೋಗಾಣುನಿಂದ ಬರುತ್ತದೆ ಇದು ಚರ್ಮ ಮತ್ತು ನರಗಳಿಗೆ ಸಂಬಂಧಿಸಿದ ಕಾಯಿಲೆಯಾಗಿದೆ ವ್ಯಕ್ತಿಯ ದೇಹದ ಮೇಲೆ ತುರಿಕೆ ಇಲ್ಲದ ತಿಳಿ,ಬಿಳಿ ತಾಮ್ರ ವರ್ಣದ ಸ್ಪರ್ಶ ಜ್ಞಾನವಿಲ್ಲದ ಮಚ್ಚೆ,ದಪ್ಪವಾದ ಅಥವಾ ಹೊಳೆಯುವ ಎಣ್ಣೆಯುಕ್ತ ಚರ್ಮ,ಕಿವಿಯಾಲೆಗಳಲ್ಲಿ ಗಂಟು,ಕಣ್ಣಿನ ರೆಪ್ಪೆಗಳನ್ನು ಮುಚ್ಚಲು ಅಸಮರ್ಥತೆ,ಕೈಕಾಲುಗಳಲ್ಲಿ ವಾಸಿಯಾಗದ ಹುಣ್ಣು, ನಡೆಯುವಾಗ ಕಾಲು ಎಳೆಯುವದು,ಕಾಲುಗಳಲ್ಲಿಜುಮ್ಮೆನುಸುವಿಕೆ,ಕೈಗಳಲ್ಲಿವಸ್ತುಗಳನ್ನುಹಿಡಿಯಲು ಅಥವಾ ಕಾಲಲ್ಲಿ ಪಾದರಕ್ಷೆ ತೊಡುವಲ್ಲಿ ಬಲಹೀನತೆ ಇವುಗಳು ಕುಷ್ಠರೋಗದ ಮುಖ್ಯ ಲಕ್ಷಣಗಳಾಗಿವೆ. ಇಂತಹ ಲಕ್ಷಣಗಳು ಕಂಡು ಬಂದಲ್ಲಿ ಸಮೀಪದ ಸರ್ಕಾರಿ ಆಸ್ಪತ್ರೆಯಲ್ಲಿ ಪರೀಕ್ಷಿಸಿಕೊಂಡು ಕುಷ್ಠರೋಗ ಇದ್ದಲ್ಲಿ ಉಚಿತವಾಗಿ ಬಹು ಔಷಧಿ ಚಿಕಿತ್ಸೆ ಪಡೆದುಕೊಂಡು ಕುಷ್ಠರೋಗವನ್ನು ತೊಲಗಿಸಬೇಕೆಂದು ಹಾಗೂ ಕುಷ್ಠರೋಗವನ್ನು ಸಂಪೂರ್ಣವಾಗಿ ಗುಣಪಡಿಸಬಹುದಾಗಿದೆ ರೋಗ ಲಕ್ಷಣಗಳ ಬಗ್ಗೆ ಜನರಿಗೆ ಅರಿವು ಮೂಡಿಸುವುದು,ಕುಷ್ಠ ರೋಗದಿಂದ ಉಂಟಾಗುವ ಅಂಗವಿಕಲತೆ ಬಗ್ಗೆ ನೆರೆಹೊರೆಯ ವ್ಯಕ್ತಿಗಳಿಗೆ ಸೂಕ್ತ ತಿಳುವಳಿಕೆ ನೀಡುವಂತೆ ಪ್ರೇರೇಪಿಸುವುದು ಈ ಜಾಗೃತಿ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿದೆ ಎಂದರು.

ನಂತರ ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಎಸ್ ಬಿ ದೇವರವರ ಮಾತನಾಡಿ ನಾವೆಲ್ಲರೂ ಸೇರಿ ಒಟ್ಟಾಗಿ ಭಾರತವನ್ನು ಕುಷ್ಠರೋಗ ಮುಕ್ತವಾಗಿಸೋಣ, ಗಾಂಧೀಜಿಯವರ ಕನಸನ್ನು ನನಸಾಗಿಸೋಣ ಎಂದರು.

ಇದೇ ಸಂದರ್ಭದಲ್ಲಿ ಸಕ್ರಿಯ ಕ್ಷಯರೋಗ ಪತ್ತೆ ಮತ್ತು ಚಿಕಿತ್ಸಾ ಆಂದೋಲನ ಕಾರ್ಯಕ್ರಮದ ಬಗ್ಗೆ ಮಾಹಿತಿ ನೀಡಲಾಯಿತು ಕಾರ್ಯಕ್ರಮದಲ್ಲಿ ಮುಖ್ಯ ಶಿಕ್ಷಕಿಯರಾದ ಶ್ರೀಮತಿ ಎಸ್ ಎ ತಡೋಲ,ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಎಸ್ ಬಿ ದೇವರವರ,ಸಹ ಶಿಕ್ಷಕರಾದ ವ್ಹಿ ಹೆಚ್ ಗುಡ್ಲಾನೂರ,ವ್ಹಿ ಎಲ್ ಪೂಜಾರ,ಎಸ್ ಎಸ್ ಪಾಟೀಲ,ಶ್ರೀಮತಿ ಆರ್ ಡಿ ಜೋಶಿ, ಶ್ರೀಮತಿ ಕೆ ವ್ಹಿ ಚೂರಿ,ಶ್ರೀಮತಿ ಯು ವಿ ಮಟ್ಟಿ ಹಾಗೂ ಶಾಲಾ ಮಕ್ಕಳು ಉಪಸ್ಥಿತರಿದ್ದರು



ಹಿಂಗಾರು ಮತ್ತು ಬೇಸಿಗೆ ಬೆಳೆ ವಿಮೆ ನೋಂದಣಿಗೆ ಅವಕಾಶ

ಹರಿಹರ : 2026–27ನೇ ಸಾಲಿನ ಹಿಂಗಾರು ಮತ್ತು ಬೇಸಿಗೆ ಹಂಗಾಮಿನ ಬೆಳೆಗಳಿಗೆ ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ (ವಿಮಾ) ಯೋಜನೆಯನ್ನು ಜಾರಿಗೊಳಿಸಿ ಸರ್ಕಾರ ಅಧಿಸೂಚನೆ ಹೊರಡಿಸಿದೆ. ರೈತರು ನಿಗದಿತ ಅವಧಿಯೊಳಗೆ ಬೆಳೆ ವಿಮೆ ಮಾಡಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ ಎಂದು ಸಹಾಯಕ ಕೃಷಿ ನಿರ್ದೇಶಕರು ತಿಳಿಸಿದ್ದಾರೆ.

ತಾಲ್ಲೂಕಿನ ಹಿಂಗಾರು ಹಂಗಾಮಿನಲ್ಲಿ ಕಸಬಾ ಹೋಬಳಿ ಮಟ್ಟದಲ್ಲಿ ಜೋಳ (ನೀರಾವರಿ) ಮತ್ತು ರಾಗಿ (ನೀರಾವರಿ) ಬೆಳೆಗಳಿಗೆ ವಿಮೆ ಮಾಡಿಸಲು ನವೆಂಬರ್ 16, 2026 ಕೊನೆಯ ದಿನಾಂಕವಾಗಿದೆ. 2026–27ನೇ ಸಾಲಿನ ಬೇಸಿಗೆ ಹಂಗಾಮಿನಲ್ಲಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಭತ್ತ (ನೀರಾವರಿ) ಬೆಳೆಗೆ ವಿಮೆ ಮಾಡಿಸಲು ಫೆಬ್ರವರಿ 26, 2027ರವರೆಗೆ ಅವಕಾಶ ಕಲ್ಪಿಸಲಾಗಿದೆ.

ಬೆಳೆ ವಿಮೆ ಯೋಜನೆಗೆ ಎಸ್‌ಬಿಐ ಜನರಲ್ ಇನ್ಶೂರೆನ್ಸ್ (SBI General Insurance) ಸಂಸ್ಥೆಯನ್ನು ವಿಮಾ ಸಂಸ್ಥೆಯನ್ನಾಗಿ ನಿಗದಿಪಡಿಸಲಾಗಿದೆ. ಬೆಳೆ ಸಾಲ ಪಡೆದ ರೈತರಿಗೆ ಆಪ್ಟಿಂಗ್ ಔಟ್ ಮತ್ತು ಆಪ್ಟಿಂಗ್ ಇನ್ ಆಯ್ಕೆ ನೀಡಲಾಗಿದ್ದು, ಬೆಳೆ ಸಾಲ ಪಡೆದ ರೈತರು ವಿಮೆ ಮಾಡಿಸುವುದು ಕಡ್ಡಾಯವಾಗಿರುವುದಿಲ್ಲ. ಬೆಳೆ ಸಾಲ ಪಡೆಯದ ರೈತರು ಅರ್ಜಿಯೊಂದಿಗೆ ಭೂಮಿ ಹೊಂದಿರುವುದಕ್ಕೆ ಸಂಬಂಧಿಸಿದ ಪಹಣಿ ದಾಖಲೆ, ಆಧಾರ್ ಸಂಖ್ಯೆ ಜೋಡಣೆಯಾಗಿರುವ ಬ್ಯಾಂಕ್ ಖಾತೆಯ ವಿವರ ಹಾಗೂ ಆಧಾರ್ ಕಾರ್ಡ್ ಪ್ರತಿಯನ್ನು ಸಂಬಂಧಪಟ್ಟ ಬ್ಯಾಂಕ್ ಅಥವಾ ಸಿಎಸ್‌ಸಿ ಕೇಂದ್ರಗಳಿಗೆ ಸಲ್ಲಿಸಿ

SAMALOCHANE RANEBENNURSUDDI
Kannada Daily Morning

ಸಮಾಲೋಚನೆ ಸುದ್ದಿ

ಶುಕ್ರವಾರ 13 ನವೆಂಬರ್ 2026
13 NOVEMBER 2026

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಸಮಗ್ರ ಅಭಿವೃದ್ಧಿಗೆ ಮಹತ್ವದ ಚರ್ಚೆ: ಸಚಿವ ರುದ್ರಪ್ಪ ಲಮಾಣಿ ಭಾಗಿ

ಹಾವೇರಿ: ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಅಧ್ಯಕ್ಷತೆಯಲ್ಲಿ ಬೆಂಗಳೂರಿನ ಖಾಸಗಿ ಹೋಟೆಲ್‌ನಲ್ಲಿ ಇಂದು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಮಗ್ರ ಅಭಿವೃದ್ಧಿ ಕಾರ್ಯಕ್ರಮಗಳ ಕುರಿತು ಮಹತ್ವದ ಸಭೆ ನಡೆಯಿತು.

ಸಭೆಯಲ್ಲಿ ಜವಳಿ ಹಾಗೂ ಸಕ್ಕರೆ ಸಚಿವರಾದ ರುದ್ರಪ್ಪ ಲಮಾಣಿ ಅವರು ಭಾಗವಹಿಸಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಶೈಕ್ಷಣಿಕ, ಸಾಮಾಜಿಕ ಹಾಗೂ ಆರ್ಥಿಕ ಸಬಲೀಕರಣ ಸೇರಿದಂತೆ ಸಮುದಾಯಗಳ ಸಮಗ್ರ ಅಭಿವೃದ್ಧಿಗೆ ಸಂಬಂಧಿಸಿದ ಹಲವು ಪ್ರಮುಖ ವಿಚಾರಗಳ ಕುರಿತು ನಡೆದ ಚರ್ಚೆಯಲ್ಲಿ ಪಾಲ್ಗೊಂಡರು. ಸಮುದಾಯಗಳ ಶೈಕ್ಷಣಿಕ ಪ್ರಗತಿ, ಉದ್ಯೋಗಾವಕಾಶಗಳ ಹೆಚ್ಚಳ, ಆರ್ಥಿಕ ಸ್ವಾವಲಂಬನೆ ಹಾಗೂ ಸಾಮಾಜಿಕ ನ್ಯಾಯವನ್ನು ಬಲಪಡಿಸುವ ನಿಟ್ಟಿನಲ್ಲಿ ಸರ್ಕಾರದ ವಿವಿಧ ಯೋಜನೆಗಳ ಪರಿಣಾಮಕಾರಿ ಅನುಷ್ಠಾನ ಸೇರಿದಂತೆ ಹಲವು ವಿಷಯಗಳು ಸಭೆಯಲ್ಲಿ ಚರ್ಚೆಗೆ ಬಂದವು. ಸಭೆಯಲ್ಲಿ ಉಪಮುಖ್ಯಮಂತ್ರಿಗಳಾದ ಡಾ. ಜಿ. ಪರಮೇಶ್ವರ, ಕೆಪಿಸಿಸಿ ಅಧ್ಯಕ್ಷರಾದ ಬಿ.ಕೆ.ಹರಿಪ್ರಸಾದ್, ಸಚಿವರಾದ ಕೆ.ಹೆಚ್.ಮುನಿಯಪ್ಪ, ಎಂ.ಬಿ. ಪಾಟೀಲ್, ರಾಮಲಿಂಗಾರೆಡ್ಡಿ, ಈಶ್ವರ್ ಖಂಡ್ರೆ, ಸತೀಶ್ ಜಾರಕಿಹೊಳಿ, ಲಕ್ಷ್ಮಣ್ ಸವದಿ, ಚಲುವರಾಯಸ್ವಾಮಿ, ಕೃಷ್ಣ ಬೈರೇಗೌಡ, ಪ್ರಿಯಾಂಕ್ ಖರ್ಗೆ, ಯತೀಂದ್ರ ಸಿದ್ದರಾಮಯ್ಯ, ನರೇಂದ್ರಸ್ವಾಮಿ, ರಘುಮೂರ್ತಿ, ಬಸವಂತಪ್ಪ, ಮುಖ್ಯಮಂತ್ರಿಗಳ ಪ್ರಧಾನ ಸಲಹೆಗಾರರಾದ ಡಾ. ಜಿ.ಸಿ. ಚಂದ್ರಶೇಖರ್, ಮಾಜಿ ಸಚಿವರು ಹಾಗೂ ಶಾಸಕರಾದ ಹೆಚ್.ಸಿ. ಮಹದೇವಪ್ಪ ಸೇರಿದಂತೆ ಸಂಸದರು, ಶಾಸಕರು, ವಿಧಾನ ಪರಿಷತ್ ಸದಸ್ಯರು ಹಾಗೂ ವಿವಿಧ ನಿಗಮ–ಮಂಡಳಿಗಳ ಅಧ್ಯಕ್ಷರು ಉಪಸ್ಥಿತರಿದ್ದರು.



ನಿರಂತರ ವಿದ್ಯುತ್ ಪೂರೈಕೆಗೆ ಹೆಸ್ಕಾಂ ಕ್ರಮ: 42 ಫೀಡರ್‌ಗಳಲ್ಲಿ ನಿರ್ವಹಣಾ ಕಾರ್ಯಾಚರಣೆ

ಹಾವೇರಿ: ಜಿಲ್ಲೆಯಾದ್ಯಂತ ವಿದ್ಯುತ್ ಸರಬರಾಜು ವ್ಯವಸ್ಥೆಯನ್ನು ಮತ್ತಷ್ಟು ಸುಧಾರಿಸುವ ಹಾಗೂ ನಿರಂತರ ವಿದ್ಯುತ್ ಪೂರೈಕೆಯನ್ನು ಖಚಿತಪಡಿಸುವ ಉದ್ದೇಶದಿಂದ ಹೆಸ್ಕಾಂ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ವಿಶೇಷ ವಿದ್ಯುತ್ ನಿರ್ವಹಣಾ ಕಾರ್ಯಾಚರಣೆ ಯಶಸ್ವಿಯಾಗಿ ಕೈಗೊಳ್ಳಲಾಗಿದೆ.

ಹಾವೇರಿ ಹೆಸ್ಕಾಂ ವೃತ್ತದ ವ್ಯಾಪ್ತಿಯಲ್ಲಿ ನವೆಂಬರ್ 11ರಂದು ವಿಶೇಷ ವಿದ್ಯುತ್ ನಿರ್ವಹಣಾ ಅಭಿಯಾನ ಹಮ್ಮಿಕೊಳ್ಳಲಾಗಿತ್ತು. ಈ ಅಭಿಯಾನದಡಿ ಜಿಲ್ಲೆಯ ವಿವಿಧ ತಾಲೂಕುಗಳಲ್ಲಿನ ವಿದ್ಯುತ್ ಮಾರ್ಗಗಳು, ಪರಿವರ್ತಕಗಳು ಹಾಗೂ ವಿದ್ಯುತ್ ವಿತರಣಾ ವ್ಯವಸ್ಥೆಗಳ ನಿರ್ವಹಣಾ ಕಾಮಗಾರಿಗಳನ್ನು ಕೈಗೊಳ್ಳಲಾಯಿತು.

ಹಾವೇರಿ, ಗುತ್ತಲ, ಅಕ್ಕಿಆಲೂರು, ಬಂಕಾಪುರ, ಹುಲಗೂರು, ನೀರಲಗಿ, ಶಿಗ್ಗಾಂವಿ, ಸವಣೂರು, ಹಾನಗಲ್, ರಾಣೇಬೆನ್ನೂರು–1 (ಖಖಆ), ರಾಣೇಬೆನ್ನೂರು–2 (ಖಖಆ), ಬ್ಯಾಡಗಿ, ಹಿರೇಕೆರೂರು ಹಾಗೂ ರಟ್ಟೀಹಳ್ಳಿ ಸೇರಿದಂತೆ ವಿವಿಧ ಉಪವಿಭಾಗಗಳ ವ್ಯಾಪ್ತಿಯ ಒಟ್ಟು 42 ವಿದ್ಯುತ್ ಫೀಡರ್‌ಗಳಲ್ಲಿ ನಿರ್ವಹಣಾ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.

ವಿದ್ಯುತ್ ವ್ಯತ್ಯಯ ತಡೆಗೆ ಕ್ರಮ : ವಿದ್ಯುತ್ ಮಾರ್ಗಗಳ ಸುರಕ್ಷತೆ ಮತ್ತು ಕಾರ್ಯಕ್ಷಮತೆ ಹೆಚ್ಚಿಸುವ ನಿಟ್ಟಿನಲ್ಲಿ 11 ಕೆ.ವಿ. ವಿದ್ಯುತ್ ಮಾರ್ಗಗಳು ಹಾಗೂ ವಿದ್ಯುತ್ ಪರಿವರ್ತಕಗಳ ನಿರ್ವಹಣೆ, ವಿದ್ಯುತ್ ಮಾರ್ಗಗಳಿಗೆ ಅಡ್ಡಿಯಾಗಿದ್ದ ಮರದ ಕೊಂಬೆಗಳ ತೆರವು, ಹಾಳಾದ ವಿದ್ಯುತ್ ಪರಿಕರಗಳ ಬದಲಾವಣೆ, ವಿದ್ಯುತ್ ಕಂಬಗಳು ಹಾಗೂ ಮಾರ್ಗಗಳ ದುರಸ್ತಿ ಸೇರಿದಂತೆ ವಿವಿಧ ಕಾಮಗಾರಿಗಳನ್ನು ಕೈಗೊಳ್ಳಲಾಯಿತು. ವಿದ್ಯುತ್ ವಿತರಣಾ ಕೇಂದ್ರಗಳಲ್ಲಿನ ನಿರ್ವಹಣಾ ಕಾರ್ಯಗಳು, ವಿದ್ಯುತ್ ಪರಿವರ್ತಕ ಕೇಂದ್ರಗಳ ಸುಧಾರಣೆ ಹಾಗೂ ತಾಂತ್ರಿಕ ದೋಷಗಳನ್ನು ಸರಿಪಡಿಸುವ ಕಾರ್ಯಕ್ಕೂ ಆದ್ಯತೆ ನೀಡಲಾಯಿತು.

ಗ್ರಾಮೀಣ ಪ್ರದೇಶಗಳಿಗೂ ಅಭಿಯಾನದ ಪ್ರಯೋಜನ : ಜಿಲ್ಲೆಯ ವಿವಿಧ ಗ್ರಾಮಗಳು ಹಾಗೂ ಪಟ್ಟಣ ಪ್ರದೇಶಗಳಲ್ಲಿನ ವಿದ್ಯುತ್ ಮಾರ್ಗಗಳ ನಿರ್ವಹಣೆಯ ಮೂಲಕ ವಿದ್ಯುತ್ ಸರಬರಾಜಿನಲ್ಲಿ ಉಂಟಾಗುವ ಅಡಚಣೆಗಳನ್ನು ಕಡಿಮೆ ಮಾಡಲು ಕ್ರಮ ಕೈಗೊಳ್ಳಲಾಗಿದೆ. ರೈತರು, ಸಾರ್ವಜನಿಕರು ಹಾಗೂ ಕೈಗಾರಿಕಾ ಗ್ರಾಹಕರಿಗೆ ಗುಣಮಟ್ಟದ ಮತ್ತು ನಿರಂತರ ವಿದ್ಯುತ್ ಸೇವೆ ಒದಗಿಸುವುದು ಈ ಅಭಿಯಾನದ ಪ್ರಮುಖ ಉದ್ದೇಶವಾಗಿದೆ.



ವಿದ್ಯುತ್ ಜಾಲದ ನಿರಂತರ ಮೇಲ್ವಿಚಾರಣೆ, ಕಾಲಕಾಲಕ್ಕೆ ಅಗತ್ಯ ನಿರ್ವಹಣೆ ಹಾಗೂ ಸಾರ್ವಜನಿಕರಿಗೆ ಉತ್ತಮ ವಿದ್ಯುತ್ ಸೇವೆ ಒದಗಿಸುವ ನಿಟ್ಟಿನಲ್ಲಿ ಇಂತಹ ವಿಶೇಷ ಕಾರ್ಯಾಚರಣೆಗಳು ಮಹತ್ವದ ಪಾತ್ರ ವಹಿಸಲಿವೆ ಎಂದು ಹಾವೇರಿ ಹೆಸ್ಕಾಂ ವೃತ್ತದ ಅಧೀಕ್ಷಕ ಇಂಜಿನಿಯರ್ (ವಿದ್ಯುತ್), ಕಾರ್ಯ ಮತ್ತು ಪಾಲನಾ ವೃತ್ತದ ವತಿಯಿಂದ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ನೇರ ಸಂದರ್ಶನ

ಹಾವೇರಿ: ಹನುಮನಮಟ್ಟಿ ಕೃಷಿ ಮಹಾವಿದ್ಯಾಲಯದಲ್ಲಿ ಕೃಷಿ ಇಂಜನೀಯರಿಂಗ್ ವಿಭಾಗದ ತಾತ್ಕಾಲಿಕ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ನೇರ ಸಂದರ್ಶನ ನವೆಂಬರ್ 16 ರಂದು ಬೆಳಿಗ್ಗೆ 10 ಗಂಟೆಗೆ ಹನುಮನಮಟ್ಟಿ ಕೃಷಿ ಮಹಾವಿದ್ಯಾಲಯದ ಆವರಣದಲ್ಲಿ ಜರುಗಲಿದೆ. ಹೆಚ್ಚಿನ ಮಾಹಿತಿಗಾಗಿ ಧಾರವಾಡ ಕೃಷಿ ವಿಶ್ವವಿದ್ಯಾಲಯದ ವೆಬ್‌ಸೈಟ್ www.uasd.edu ನೋಡಬಹುದು ಎಂದು ಹನುಮನಮಟ್ಟಿ ಕೃಷಿ ಮಹಾವಿದ್ಯಾಲಯದ ಡೀನ್(ಕೃಷಿ) ಮತ್ತು ಆವರಣದ ಮುಖ್ಯಸ್ಥರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

2026–27ನೇ ಸಾಲಿನ ಹಿಂಗಾರು ಹಂಗಾಮಿನ ಬೆಳೆ ವಿಮೆ ನೋಂದಣಿ ಕುರಿತು

ಗದಗ: 2026–27 ರ ಹಿಂಗಾರು ಹಂಗಾಮಿಗಾಗಿ ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯಡಿ ರೈತರು ಬೆಳೆಗಳಿಗೆ ನೋಂದಣಿ ಮಾಡಿಕೊಳ್ಳಬಹುದಾಗಿದೆ. ಜಿಲ್ಲೆಯಲ್ಲಿ ಇಂಡಸ್‌ಇಂಡ್ ಜನರಲ್ ಇನ್ಸೂರನ್ಸ್ ಕಂಪನಿ ಅನುಷ್ಠಾನ ವಿಮಾ ಸಂಸ್ಥೆಯಾಗಿ ಆಯ್ಕೆಯಾಗಿರುತ್ತದೆ.

ಜೋಳ (ಮಳೆ & ನೀರಾವರಿ), ಮುಸುಕಿನ ಜೋಳ (ಮಳೆಆಶ್ರಿತ) ಸೂರ್ಯಕಾಂತಿ (ಮಳೆ), ಕುಸುಬೆ (ಮಳೆ), ಹುರುಳಿ (ಮಳೆಆಶ್ರಿತ) ಬೆಳೆಗಳಿಗೆ ನವಂಬರ್ 16 ಕೊನೆಯ ದಿನವಾಗಿದೆ. ಮುಸುಕಿನ ಜೋಳ (ನೀರಾವರಿ), ಕಡಲೆ (ಮಳೆಆಶ್ರಿತ), ಸೂರ್ಯಕಾಂತಿ (ನೀರಾವರಿ) ಬೆಳೆಗಳಿಗೆ ನವಂಬರ್ 30 ಕೊನೆಯ ದಿನವಾಗಿದೆ. ಗೋಧಿ (ಮಳೆ & ನೀರಾವರಿ), ಕಡಲೆ (ನೀರಾವರಿ) ಬೆಳೆಗಳಿಗೆ ಡಿಸೆಂಬರ್ 15 ಕೊನೆಯ ದಿನವಾಗಿದೆ. ಭತ್ತ (ನೀರಾವರಿ) ಶೇಂಗಾ (ನೀರಾವರಿ) ಬೆಳೆಗಳಿಗೆ ಫೆಬ್ರುವರಿ 26 2027 ಮತ್ತು ಮಾರ್ಚ 16 2027 ಕೊನೆಯ ದಿನವಾಗಿದೆ.

ಬೆಳೆ ವಿಮೆ ಮಾಡಿಸುವ ರೈತರು ಈಖಗಖಖಖಆ ಈಖಆ ಅನ್ನು ಹೊಂದಿರುವುದು ಕಡ್ಡಾಯವಾಗಿರುತ್ತದೆ. ರೈತರು ಭೂಮಿ ಹೊಂದಿರುವುದಕ್ಕೆ ದಾಖಲೆಗಳಾದ ಪಹಣಿ / ಖಾತೆ ಪುಸ್ತಕ / ಕಂದಾಯ ರಶೀದಿಯನ್ನು ಸಂಬಂಧಿಸಿದ ಬ್ಯಾಂಕ, ಹತ್ತಿರದ ಸಾರ್ವಜನಿಕ ಸೇವಾ ಕೇಂದ್ರ, ಗ್ರಾಮ ಒನ್ ಕೇಂದ್ರಗಳಲ್ಲಿ ನೋಂದಣಿ ಮಾಡಿಕೊಳ್ಳಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಸಮೀಪದ ರೈತ ಸಂಪರ್ಕ ಕೇಂದ್ರ / ತಾಲೂಕು ಸಹಾಯಕ ಕೃಷಿ ನಿರ್ದೇಶಕರ ಕಛೇರಿ ಹಾಗೂ ಸಂಬಂಧಿಸಿದ ವಿಮಾ ಸಂಸ್ಥೆಯ ಗದಗ ಶಾಖೆಯನ್ನು ಸಂಪರ್ಕಿಸಬಹುದು ಎಂದು ಜಂಟಿ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದೌರ್ಜನ್ಯ ನಿಯಂತ್ರಣ ಪ್ರತಿಯೊಬ್ಬರ ಕರ್ತವ್ಯ : ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ್

ಗದಗ: ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರ ಮೇಲಿನ ದೌರ್ಜನ್ಯ ನಿಯಂತ್ರಣ ಮಾಡುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ. ಈ ನಿಟ್ಟಿನಲ್ಲಿ ಇಲಾಖೆಯ ಅಧಿಕಾರಿಗಳು ಪರಸ್ಪರ ಸಮನ್ವಯತೆಯಿಂದ ಕಾರ್ಯನಿರ್ವಹಿಸಬೇಕೆಂದು ಜಿಲ್ಲಾಧಿಕಾರಿ ಸಿ.ಎನ್.ಶ್ರೀಧರ್ ಸೂಚಿಸಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಬುಧವಾರ (ನವೆಂಬರ್ 11 ರಂದು) ಜಿಲ್ಲಾ ಮಟ್ಟದ ಪ.ಜಾ/ಪ.ಪಂ. ಜಿಲ್ಲಾ ಜಾಗೃತ ದೌರ್ಜನ್ಯ ನಿಯಂತ್ರಣ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿನ ಪ್ರತಿಷ್ಠಿತ ಶಾಲೆಗಳಿಗೆ ಅಧಿಕಾರಿಗಳು ಅನಿರೀಕ್ಷಿತ ಭೇಟಿ ನೀಡಿ ಶಾಲೆಗಳಲ್ಲಿನ ಮೂಲ ಸೌಕರ್ಯ ಹಾಗೂ ಶೈಕ್ಷಣಿಕ ಪ್ರಗತಿ ಕುರಿತು ಪರಿಶೀಲನೆ ನಡೆಸಬೇಕು. ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಗಳಲ್ಲಿಯಾವುದೇತಾರತಮ್ಯಮಾಡದೇ ಎಲ್ಲರಿಗೂ ಪ್ರೋತ್ಸಾಹಿಸುವಂತಾಗಬೇಕು. ಗುಣಮಟ್ಟದ ಶಿಕ್ಷಣವನ್ನು ಶಾಲಾ ಮಕ್ಕಳಿಗೆ ನೀಡುವುದು ಅತ್ಯವಶ್ಯಕವಾಗಿದ್ದು ಈ ನಿಟ್ಟಿನಲ್ಲಿ ಅಧಿಕಾರಿಗಳು ಕ್ರಮ ವಹಿಸಬೇಕು ಎಂದರು.

ಪರಿಶಿಷ್ಟ ಸಮುದಾಯ ಕಾಲೋನಿಗಳಲ್ಲಿ ರಸ್ತೆ, ವಿದ್ಯುತ್ ಪೂರೈಕೆ , ಸಮರ್ಪಕ ಕುಡಿಯುವ



ನೀರಿನ ಪೂರೈಕೆ ಸೇರಿದಂತೆ ಮೂಲಭೂತ ಸೌಕರ್ಯಗಳು ಒದಗುವಂತೆ ನೋಡಿಕೊಳ್ಳಬೇಕು. ಪ.ಜಾ/ ಪ.ಪಂ. ದೌರ್ಜನ್ಯ ಪ್ರಕರಣದಡಿ ಅರ್ಹ ಸಂತ್ರಸ್ಥರಿಗೆ ಪರಿಹಾರ ಧನ ಒದಗಿಸುವಲ್ಲಿ ವಿನಾ ಕಾರಣ ವಿಳಂಬ ಮಾಡಬಾರದು. ಸರ್ಕಾರದ ಸೌಲಭ್ಯಗಳು ಅರ್ಹ ಫಲಾನುಭವಿಗಳಿಗೆ ವಿಳಂಬವಾಗದಂತೆ ಒದಗಿಸಬೇಕು. ಅರ್ಹರಿಗೆ ಸಾಮಾಜಿಕ ನ್ಯಾಯ ಒದಗಿಸುವಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಬೇಕು ಎಂದು ಜಿಲ್ಲಾಧಿಕಾರಿಗಳು ನಿರ್ದೇಶನ ನೀಡಿದರು.

ಎಸ್‌ಸಿಪಿ / ಟಿಎಸ್‌ಪಿ ಸೌಲಭ್ಯಗಳ ಕುರಿತು ಸಾರ್ವಜನಿಕರಿಗೆ ಜಾಗೃತಿ ಮೂಡಿಸಲು ಕಾರ್ಯಾಗಾರಗಳನ್ನು ಹಮ್ಮಿಕೊಳ್ಳಬೇಕು. ಪ.ಜಾ ಪ.ಪಂ ಜನರಿಗೆ ತಲುಪಬೇಕಾದ ವಸತಿ. ವೈದ್ಯಕೀಯ.ಶಿಕ್ಷಣಸೇರಿದಂತೆವಿವಿಧಸೌಲಭ್ಯಗಳು ಅರ್ಹರಿಗೆ ಸಕಾಲದಲ್ಲಿಯೆ ದೊರಕಬೇಕು. ಫಲಾನುಭವಿಗಳಆಯ್ಕೆಪಟ್ಟಿಯಲ್ಲಿಪಾರದರ್ಶಕತೆ ಕಾಯ್ದುಕೊಳ್ಳುವುದು ಅಗತ್ಯವಾಗಿದೆ. ಯಾವುದೇ ಕಾರಣಕ್ಕೂ ಸೌಲಬ್ಯಗಳ ವಿತರಣೆಯಲ್ಲಿ ದುರುಪಯೋಗವಾಗಬಾರದು. ಈ ನಿಟ್ಟಿನಲ್ಲಿ ವಿವಿಧ ಇಲಾಖೆಯ ಅಧಿಕಾರಿಗಳು ವಿಶೇಷ ಆಸಕ್ತಿಯಿಂದ ಕೆಲಸ ನಿರ್ವಹಿಸಬೇಕು ಎಂದು ಜಿಲ್ಲಾಧಿಕಾರಿ ಸಿ.ಎನ್.ಶ್ರೀಧರ್ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಸಭೆಯ ಆರಂಭದಲ್ಲಿ ಹಿಂದಿನ ಸಭೆಯ ಅನುಪಾಲನಾ ವರದಿಯನ್ನು ಸಭೆಯ ಮುಂದೆ ಮಂಡಿಸಲಾಯಿತು.

ಈ ಸಂಧರ್ಭದಲ್ಲಿ ಡಿವೈಎಸ್‌ಪಿ ಮಹಾಂತೇಶ ಸಜ್ಜನ, ಜಿ.ಪಂ. ಉಪಕಾರ್ಯದರ್ಶಿ ಸಿ.ಆರ್. ಮುಂಡರಗಿ, ಸರ್ಕಾರಿ ವಕೀಲರಾದ ಮಲ್ಲಿಕಾರ್ಜುನಗೌಡ ದೊಡ್ಡನಗೌಡ್ರ, ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಎಸ್.ಬಿ.ಮಸನಾಯಕ, ಡಿಡಿಪಿಐ ಕೆ.ಡಿ.ಬಡಿಗೇರ, ಗದಗ ಬೆಟಗೇರಿ ನಗರಸಭೆಯ ಪೌರಾಯುಕ್ತ ರಾಜರಾಮ ಪವಾರ, ಲೀಡ್ ಬ್ಯಾಂಕ್ ಮ್ಯಾನೇಜರ್ ಸಂತೋಷ್, ನಾಮನಿರ್ದೇಶಿತ ಸದಸ್ಯರುಗಳಾದ ಶರೀಫ್ ಬಿಳೆಯಲಿ, ವಿನಾಯಕ ಎಸ್ ಬಳ್ಳಾರಿ, ತುಕ್ಕಪ್ಪ ಚಂದಪ್ಪ ಪೂಜಾರ, ಸಂಗಮೇಶ ಹಾದಿಮನಿ, ವಿವಿಧ ಇಲಾಖೆಯ ಅಧಿಕಾರಿಗಳು ಹಾಜರಿದ್ದರು.

ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕಿ ಶ್ರೀಮತಿ ಡಾ. ನಂದಾ ಹಣಬರಟ್ಟಿ ಸರ್ವರನ್ನು ಸ್ವಾಗತಿಸಿ ವಂದಿಸಿದರು.

ಐದು ದಶಕಗಳ ಸಾರ್ಥಕ ಸಿನಿಮಾ ಪಯಣಕ್ಕೆ 'ಕಾಸರವಳ್ಳಿ @ 50' ಗೌರವದ ಸಂಭ್ರಮ

ಡಿಸೆಂಬರ್ 3ರಿಂದ 5ರವರೆಗೆ ಮೂರು ದಿನಗಳ ವಿಶೇಷ ಅಭಿನಂದನಾ ಸಮಾರಂಭ; ಮಣಿರತ್ನಂ, ಅನುರಾಗ್ ಕಶ್ಯಪ್, ರಸೂಲ್ ಪೂಕುಟ್ಟಿ ಸೇರಿದಂತೆ ಹಲವು ಗಣ್ಯರ ಉಪಸ್ಥಿತಿ; 'ಘಟಶ್ರಾದ್ಧ' ಸೇರಿದಂತೆ ಐದು ಚಿತ್ರಗಳ ಪ್ರದರ್ಶನ, ಮಾಸ್ಟರ್ ಕ್ಲಾಸ್, ಸಂವಾದ ಹಾಗೂ ವಿಚಾರ ಸಂಕಿರಣಗಳ ಆಯೋಜನೆ .

ಕನ್ನಡ ಚಿತ್ರರಂಗದ ಹೆಮ್ಮೆಯ ಹಿರಿಯ ನಿರ್ದೇಶಕ ಡಾ. ಗಿರೀಶ್ ಕಾಸರವಳ್ಳಿ ಅವರು ಚಿತ್ರರಂಗಕ್ಕೆ ಸಲ್ಲಿಸಿರುವ ಐದು ದಶಕಗಳ ಅಮೂಲ್ಯ ಕೊಡುಗೆಯನ್ನು ಗೌರವಿಸುವ ನಿಟ್ಟಿನಲ್ಲಿ ಕನ್ನಡ ಚಲನಚಿತ್ರ ವಾಣಿಜ್ಯ ಮಂಡಳಿಯ ವತಿಯಿಂದ ಡಿಸೆಂಬರ್ 3, 4 ಮತ್ತು 5ರಂದು ಮೂರು ದಿನಗಳ ವಿಶೇಷ ಅಭಿನಂದನಾ ಸಮಾರಂಭವನ್ನು ಆಯೋಜಿಸಲಾಗಿದೆ. 'ಕಾಸರವಳ್ಳಿ@50' ಹೆಸರಿನಲ್ಲಿ ನಡೆಯಲಿರುವ ಈ ವಿಶೇಷ ಕಾರ್ಯಕ್ರಮಕ್ಕೆ ಕನ್ನಡ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಕೃಷ್ಣೇಗೌಡರು ಸಾರಥ್ಯ ವಹಿಸಿದ್ದಾರೆ.

ಈ ಮೂರು ದಿನಗಳ ಕಾರ್ಯಕ್ರಮದಲ್ಲಿ ಡಾ. ಗಿರೀಶ್ ಕಾಸರವಳ್ಳಿ ಅವರ 'ಘಟಶ್ರಾದ್ಧ' ಸೇರಿದಂತೆ ಆಯ್ದ ಐದು ಚಿತ್ರಗಳ ಪ್ರದರ್ಶನದ ಜೊತೆಗೆ ಸಿನಿಮಾ ಕ್ಷೇತ್ರದ ವಿವಿಧ ವಿಭಾಗಗಳ ಕುರಿತು ಮಾಸ್ಟರ್ ಕ್ಲಾಸ್‌ಗಳು, ಸಂವಾದಗಳು ಮತ್ತು ವಿಚಾರ ಸಂಕಿರಣಗಳು ನಡೆಯಲಿವೆ. ಖ್ಯಾತನಿರ್ದೇಶಕರಾದ ಮಣಿರತ್ನಂ, ಅನುರಾಗ್ ಕಶ್ಯಪ್ ಹಾಗೂ ಆಸ್ಕರ್ ಪ್ರಶಸ್ತಿ ವಿಜೇತ ಸೌಂಡ್ ಡಿಸೈನರ್ ರಸೂಲ್ ಪೂಕುಟ್ಟಿ ಅವರನ್ನು ಕಾರ್ಯಕ್ರಮಕ್ಕೆ ಆಹ್ವಾನಿಸಲಾಗಿದೆ.



ಸೌಂಡ್ ಡಿಸೈನ್ ಕುರಿತು ರಸೂಲ್ ಪೂಕುಟ್ಟಿ, ಸಿನಿಮಾ ಸಾಹಿತ್ಯ ಮತ್ತು ಗೀತರಚನೆ ಕುರಿತು ಜಯಂತ್ ಕಾಯ್ಕಿಣಿ, ಸಂಗೀತದ ಕುರಿತು ಖ್ಯಾತ ಸಂಗೀತ ನಿರ್ದೇಶಕ ಹಂಸಲೇಖಾ, ಛಾಯಾಗ್ರಹಣದ ಕುರಿತು ಅಶೋಕ್ ಕಶ್ಯಪ್ ಹಾಗೂ ಸತ್ಯ ಹೆಗಡೆ, ಸಂಕಲನದ ಕುರಿತು ಸುರೇಶ್ ಅರಸ್ ಮತ್ತು ಗುಣಶೇಖರ್ ತಮ್ಮ ಅನುಭವಗಳನ್ನು ಹಂಚಿಕೊಳ್ಳಲಿದ್ದಾರೆ. ಇದರ ಜೊತೆಗೆ ಮಹಿಳಾ ಪ್ರಧಾನ ಕಥಾವಸ್ತುವಿನ ಸಿನಿಮಾಗಳ ಕುರಿತು ವಿಶೇಷ ಸಂವಾದ ಹಾಗೂ ವಿಚಾರ ಸಂಕಿರಣ ನಡೆಯಲಿದೆ. ಈ ಸಂವಾದದಲ್ಲಿ ಕನ್ನಡ ಚಿತ್ರರಂಗದ ಹೆಸರಾಂತ ನಟಿಯರು ಭಾಗವಹಿಸಿ ತಮ್ಮ ಅನುಭವಗಳನ್ನು ಹಂಚಿಕೊಳ್ಳಲಿದ್ದಾರೆ. ಮೂರು ದಿನಗಳಲ್ಲಿ ಗಿರೀಶ್ ಕಾಸರವಳ್ಳಿ ನಿರ್ದೇಶನದ 'ಘಟಶ್ರಾದ್ಧ' ಸೇರಿದಂತೆ ಅವರ ಐದು ಪ್ರಮುಖ ಚಿತ್ರಗಳ ಪ್ರದರ್ಶನ ಕೂಡ ಇರಲಿದೆ. ಈ ಕಾರ್ಯಕ್ರಮದ ಕುರಿತು ಮಾಹಿತಿ ನೀಡಲು ಪತ್ರಿಕಾಗೋಷ್ಠಿ ಆಯೋಜಿಸಲಾಗಿತ್ತು.

ಕೃಷ್ಣೇಗೌಡ: ಹಿರಿಯ ನಿರ್ದೇಶಕರ ಸಾಧನೆ ಮುಂದಿನ ಪೀಳಿಗೆಗೆ ಪರಿಚಯವಾಗಲಿ: ಈ ಕುರಿತು ಮಾತನಾಡಿದ ಕನ್ನಡ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಕೃಷ್ಣೇಗೌಡ, ಹಿರಿಯ ನಿರ್ದೇಶಕರನ್ನು ಕೇವಲ ಒಂದು ದಿನದ ಸನ್ಮಾನಕ್ಕೆ ಸೀಮಿತಗೊಳಿಸದೆ, ಅವರ ಸಿನಿಮಾಗಳು, ಸಾಧನೆ, ಸಿನಿಮಾ ಭಾಷ

ಸಮಾಲೋಚನೆ ಸುದ್ದಿ
ಕನ್ನಡ ದಿನ ಪತ್ರಿಕೆ
SAMALOCHANE RANEBENNURSUDDI
Kannada Daily Morning



ಕರ್ನಾಟಕ: ಜಾಗತಿಕ ಜವಳಿ ಭವಿಷ್ಯದತ್ತ ನೇಕಾರಿಕೆ ಪರಂಪರೆ

ಜವಳಿ ಉತ್ಪಾದನೆಯನ್ನು ಬಲಪಡಿಸುವುದು, ಕುಶಲಕರ್ಮಿಗಳಿಗೆ ಸಬಲೀಕರಣ ನೀಡುವುದು ಮತ್ತು ಕರ್ನಾಟಕವನ್ನು ಜಾಗತಿಕ ಜವಳಿ ಕೇಂದ್ರವಾಗಿ ರೂಪಿಸುವುದು



ಇತ್ತೀಚೆಗೆ ನ್ಯಾಷನಲ್ ಗ್ಯಾಲರಿ ಆಫ್ ಮಾಡ್ರನ್ ಆರ್ಟ್ (ಓಖಒಂ), ಬೆಂಗಳೂರು ಇಲ್ಲಿ **"ಟೆಕ್ಸ್‌ಟೈಲ್ಸ್ ಆಫ್ ಕರ್ನಾಟಕ"** ಎಂಬ ವಸ್ತು ಪ್ರದರ್ಶನವನ್ನು ಉದ್ಘಾಟನೆ ಮಾಡಲಾಗಿದೆ. ಜವಳಿ ಮತ್ತು ಕೈಮಗ್ಗ ಕ್ಷೇತ್ರದಲ್ಲಿ ಕರ್ನಾಟಕವು ಶ್ರೀಮಂತ ಹಾಗೂ ವಿಶಿಷ್ಟ ಪರಂಪರೆಯನ್ನು ಹೊಂದಿದ್ದು, ಸಾಂಪ್ರದಾಯಿಕ ಕರಕುಶಲತೆಯನ್ನು ಆಧುನಿಕ ಕೈಗಾರಿಕಾ ಸಾಮರ್ಥ್ಯಗಳೊಂದಿಗೆ ಸಂಯೋಜಿಸಿದೆ. ವಿಶ್ವಪ್ರಸಿದ್ಧ ಮೈಸೂರು ರೇಷ್ಮೆ ಸೀರೆಗಳಿಂದ ಹಿಡಿದು ಆಕರ್ಷಕ ಇಳಕಲ್ ಸೀರೆಗಳು, ಕಸೂತಿ ಕಲೆ ಮತ್ತು ಲಂಬಾಣಿ ಕರಕುಶಲ ವಸ್ತುಗಳವರೆಗೆ, ರಾಜ್ಯದ ಜವಳಿ ಪರಂಪರೆಯು ಸಂಸ್ಕೃತಿ, ಸೃಜನಶೀಲತೆ, ಕೌಶಲ್ಯ ಮತ್ತು ಉದ್ಯಮಶೀಲತೆಯ ವಿಶಿಷ್ಟ ಸಂಗಮವಾಗಿದೆ. ಇಂದಿನ ಲೇಖನದಲ್ಲಿ ಕರ್ನಾಟಕದ ಶ್ರೀಮಂತ ಜವಳಿ ಉತ್ಪಾದನಾ ಪರಂಪರೆಯ ಕುರಿತು ಇನ್ನಷ್ಟು ತಿಳಿದುಕೊಳ್ಳೋಣ.

ಭಾರತದ ಜವಳಿ ಉದ್ಯಮಕ್ಕೆ ಕರ್ನಾಟಕದ ಮಹತ್ವದ ಕೊಡುಗೆ: ಭಾರತದ ಜವಳಿ ಉತ್ಪಾದನಾ ಕ್ಷೇತ್ರದಲ್ಲಿ ಕರ್ನಾಟಕವು ಪ್ರಮುಖ ಸ್ಥಾನವನ್ನು ಹೊಂದಿದೆ. ರೇಷ್ಮೆ ಉತ್ಪಾದನೆ, ನೂಲು ತಯಾರಿಕೆ, ಉಡುಪು ಉತ್ಪಾದನೆ, ರಫ್ತು, ಕೈಮಗ್ಗ ಮತ್ತು ವಿದ್ಯುತ್ ಮಗ್ಗಗಳು ಸೇರಿದಂತೆ ಹಲವು ಕ್ಷೇತ್ರಗಳಿಗೆ ರಾಜ್ಯವು ಕೊಡುಗೆ ನೀಡುತ್ತಿದೆ.

ದೇಶದ ಹಿಪ್ಪುನೇರಳೆ ರೇಷ್ಮೆಯ ಸುಮಾರು 43% ಅನ್ನು ರಾಜ್ಯವು ಉತ್ಪಾದಿಸುತ್ತದೆ ಮತ್ತು ಭಾರತದ ಒಟ್ಟು ಕಚ್ಚಾ ರೇಷ್ಮೆ ಉತ್ಪಾದನೆಯ 32% ರಷ್ಟು ಕೊಡುಗೆ ನೀಡುತ್ತದೆ. ಇದು ಸುಮಾರು 14,500 ಮೆಟ್ರಿಕ್ ಟನ್‌ಗಳಿಗೆ ಸಮಾನವಾಗಿದೆ. ದೇಶದ ಉಡುಪು ಉತ್ಪಾದನೆಯ ಸುಮಾರು 20% ಮತ್ತು ಸುಮಾರು 2.3 ಶತಕೋಟಿ ಅಮೆರಿಕನ್ ಡಾಲರ್ ಮೌಲ್ಯದ ಉಡುಪು ರಫ್ತಿನ 12% ಪಾಲು ಕೂಡ ಕರ್ನಾಟಕದ್ದಾಗಿದೆ.

ನೂಲು ತಯಾರಿಕೆಯಲ್ಲಿ ತೊಡಗಿರುವ ಸುಮಾರು 3.57 ಲಕ್ಷ ಸ್ಪಿಂಡಲ್‌ಗಳನ್ನು ಹೊಂದಿರುವ ಸ್ಥಾಪಿತ ಹತ್ತಿ ನೂಲುವ ಉದ್ಯಮ ರಾಜ್ಯದಲ್ಲಿದೆ. ಇದರ ಸಾಂಪ್ರದಾಯಿಕ ಮತ್ತು ಅರೆ–ಕೈಗಾರಿಕಾ ನೇಕಾರಿಕೆ ವ್ಯವಸ್ಥೆಯಲ್ಲಿ ಸುಮಾರು 1,20,000 ಕೈಮಗ್ಗಗಳಿದ್ದು, ಸುಮಾರು 55,000 ಕೈಮಗ್ಗ ನೇಕಾರರಿಗೆ ಬೆಂಬಲ ನೀಡುತ್ತದೆ. ಇದಲ್ಲದೆ 1.25 ಲಕ್ಷ ವಿದ್ಯುತ್ ಮಗ್ಗ ನೇಕಾರರೂ ಇದ್ದಾರೆ.

ಕೈಮಗ್ಗ ನೇಕಾರಿಕೆವಿದ್ಯುತ್ ಮಗ್ಗ ನೇಕಾರಿಕೆ: ಭೌಗೋಳಿಕ ಗುರುತಿನ (GI tag) ಮಾನ್ಯತೆ ಪಡೆದ ಜವಳಿ ಮತ್ತು ಕೈಮಗ್ಗಗಳ ಶ್ರೀಮಂತ ಪರಂಪರೆ ಕರ್ನಾಟಕದ ಸಾಂಪ್ರದಾಯಿಕ ಜವಳಿ ಉತ್ಪನ್ನಗಳು ತಮ್ಮ ವಿಶಿಷ್ಟ ವಿನ್ಯಾಸಗಳು, ನೇಕಾರಿಕೆ ತಂತ್ರಗಳು, ಕರಕುಶಲತೆ ಮತ್ತು ಸಾಂಸ್ಕೃತಿಕ ಮಹತ್ವಕ್ಕಾಗಿ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮನ್ನಣೆ ಗಳಿಸಿವೆ. ಇವುಗಳಲ್ಲಿ ಹಲವು ಉತ್ಪನ್ನಗಳಿಗೆ ಭೌಗೋಳಿಕ ಸೂಚಕ (GI) ಮಾನ್ಯತೆ ದೊರೆತಿದ್ದು, ಅವುಗಳ ಗುರುತು ಮತ್ತು ಮಾರುಕಟ್ಟೆ ಮೌಲ್ಯವನ್ನು ಬಲಪಡಿಸಲು ಇದು ಅವಕಾಶ ಒದಗಿಸುತ್ತದೆ.

ರಾಜ್ಯದ ಪ್ರಮುಖ ಉಖ ಮಾನ್ಯತೆ ಪಡೆದ ಜವಳಿ ಮತ್ತು ಕೈಮಗ್ಗ ಉತ್ಪನ್ನಗಳು ಈ ಕೆಳಗಿನಂತಿವೆ:

*ಇಳಕಲ್ ಸೀರೆಗಳು ಮತ್ತು ಗುಳೇದಗುಡ್ಡ ಖಣ– ಬಾಗಲಕೋಟೆ ಜಿಲ್ಲೆ: ವಿಶಿಷ್ಟ ನೇಕಾರಿಕೆ ತಂತ್ರಗಳು, ಸಾಂಪ್ರದಾಯಿಕ ಅಂಚುಗಳು ಮತ್ತು ಉಜ್ವಲ ಬಣ್ಣಗಳಿಗೆ ಪ್ರಸಿದ್ಧ.

*ಮೊಳಕಾಲ್ಮೂರು ರೇಷ್ಮೆ ಸೀರೆಗಳು – ಚಿತ್ರದುರ್ಗ ಜಿಲ್ಲೆ: ಸೂಕ್ಷ್ಮ ವಿನ್ಯಾಸಗಳು ಮತ್ತು ನಯವಾದ ರೇಷ್ಮೆ ನೇಕಾರಿಕೆಗೆ ಹೆಸರುವಾಸಿ.

*ಉಡುಪಿ ಸೀರೆಗಳು– ಉಡುಪಿ ಮತ್ತು ಮಂಗಳೂರು ಪ್ರದೇಶಗಳು: ಸಾಂಪ್ರದಾಯಿಕ ಕೈಮಗ್ಗ ಕರಕುಶಲತೆ ಮತ್ತು ವಿಶಿಷ್ಟ ನೇಕಾರಿಕೆ ವಿನ್ಯಾಸಗಳಿಗೆ ಪ್ರಸಿದ್ಧ.

ಕಸೂತಿ ಕೈಮಗ್ಗ ಕಸೂತಿ ಮತ್ತು ನವಲಗುಂದ ಧರಿಗಳು– ಧಾರವಾಡ ಜಿಲ್ಲೆ: ಸೂಕ್ಷ್ಮ ಕಸೂತಿ ಹಾಗೂ ಸಾಂಪ್ರದಾಯಿಕ ನೆಲಹಾಸು ತಯಾರಿಕಾ ಕರಕುಶಲತೆಗೆ ಮಾನ್ಯತೆ ಪಡೆದಿವೆ.

ಮೈಸೂರು ರೇಷ್ಮೆ ಸೀರೆಗಳು– ಮೈಸೂರು ಜಿಲ್ಲೆ: ಐಷಾರಾಮಿ ರೇಷ್ಮೆ, ನಯವಾದ ಜರಿ ಕೆಲಸ ಮತ್ತು ಸೊಗಸಾದ ವಿನ್ಯಾಸಗಳಿಗಾಗಿ ಅಂತರರಾಷ್ಟ್ರೀಯವಾಗಿ ಮೆಚ್ಚುಗೆ ಪಡೆದಿವೆ.

*ಸಂಡೂರು ಲಂಬಾಣಿ ಕಸೂತಿ ಸೀರೆಗಳು – ಬಳ್ಳಾರಿ ಜಿಲ್ಲೆ: ವರ್ಣರಂಜಿತ ಕಸೂತಿ, ಕನ್ನಡಿಕೆಲಸ ಮತ್ತು ಸಾಂಪ್ರದಾಯಿಕ ಅಲಂಕಾರಿಕ ವಿನ್ಯಾಸಗಳಿಂದ ವಿಶಿಷ್ಟವಾಗಿವೆ.

ಗಜೇಂದ್ರಗಡ ಪಟ್ಟೆ–ಅಂಚಿನ ಸೀರೆಗಳು ಮತ್ತು ಬಟ್ಟೆಗಳು – ಗದಗ ಜಿಲ್ಲೆ: ವಿಶಿಷ್ಟ ಸಾಂಪ್ರದಾಯಿಕ ಅಂಚುಗಳು ಮತ್ತು ನೇಕಾರಿಕೆ ಪರಂಪರೆಗೆ ಹೆಸರುವಾಸಿ.

ಕೈಮಗ್ಗ ನೇಕಾರಿಕೆಯ ಇತಿಹಾಸ:

ಕೈಮಗ್ಗ ನೇಕಾರಿಕೆಯು ಕೇವಲ ವೃತ್ತಿಯಲ್ಲ. ಅದೊಂದು ಸಂಸ್ಕೃತಿ, ಪರಂಪರೆ, ಕಲೆ, ಕೌಶಲ್ಯ, ವೈಭವ, ಅದ್ಭುತ ಸೃಜನಶೀಲತೆ, ಭಾವೈಕ್ಯತೆಯ ಸಂಕೇತ, ಹೆಮ್ಮೆ, ಗೌರವ, ಅದೊಂದು ಸ್ವಾಭಿಮಾನ..... ಹೀಗೆ ಗೌರವಯುತವಾದ ಯಾವುದೇ ಪದವು ಕೈಮಗ್ಗ ನೇಕಾರಿಕೆಗೆ ಸರಿಹೊಂದುತ್ತದೆ. ಕಾರಣ ನಾಗರೀಕತೆ ಪ್ರಾರಂಭವಾದಾಗಿನಿಂದಲೂ ಮನುಷ್ಯನ ಗೌರವವನ್ನು ಕಾಪಾಡಿಕೊಂಡು ಬಂದಿರುವ ವೃತ್ತಿ ಈ ಕೈಮಗ್ಗ ನೇಕಾರಿಕೆ.

ಸಹಸ್ರಾರು ವರ್ಷಗಳ ಇತಿಹಾಸವಿರುವ ನೇಕಾರಿಕೆ ವೃತ್ತಿಯ ಬೆನ್ನೆಲುಬು ಕೈಮಗ್ಗ. ಸ್ವತಂತ್ರ್ಯಪೂರ್ವ ಭಾರತದಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಅತೀ ಹೆಚ್ಚಿನ ಉದ್ಯೋಗ ಒದಗಿಸಿರುವ ಹೆಮ್ಮೆ ಈ ಕೈಮಗ್ಗದ ಉದ್ದಿಮೆಗೆ ಇದೆ. ಇದನ್ನು ಅರಿತ ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿಯವರು ಈ ಉದ್ಯೋಗವನ್ನು ಸಂರಕ್ಷಿಸಿ ಭಾರತವನ್ನು ಸ್ವಾವಲಂಬಿ ರಾಷ್ಟ್ರವನ್ನಾಗಿ ಮಾಡಬೇಕೆಂದು ದೃಢ ನಿಲುವು ಕೈಗೊಂಡು ಅಂದಿನ ಜವಳಿ ಗಿರಣಿಗಳ ಪಾಶ್ಚಾತ್ಯ ಸಂಸ್ಕೃತಿಯನ್ನು ಧಿಕ್ಕರಿಸಲು ದೇಶದ ಜನತೆಗೆ ಕರೆ ಕೊಟ್ಟರು. ಸ್ವಾತಂತ್ರ್ಯಾನಂತರದಲ್ಲಿ ದೇಶದ ಅಧಿಕಾರದ ಚುಕ್ಕಾಣಿ ಹಿಡಿದಿದ್ದ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ತನ್ನ 20 ಅಂಶಗಳ ಅಭಿವೃದ್ಧಿಯ ಅಂಗವಾಗಿ ಕೈಮಗ್ಗ ನೇಕಾರಿಕೆಯನ್ನು ಉಳಿಸಿ ಬೆಳೆಸುವ ಧೃಢ ಸಂಕಲ್ಪ ಮಾಡಿತು. ಅದರ ಪ್ರತಿಫಲವಾಗಿ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮವು 1975 ರಲ್ಲಿ ಸ್ಥಾಪಿತವಾಯಿತು.

ನಾಗರೀಕತೆ ಬೆಳೆದಂತೆ ಮನುಷ್ಯನ ಅವಶ್ಯಕತೆಗಳು ಮತ್ತು ಅಭಿರುಚಿಗಳು ಬದಲಾದವು. ಕಾಲ ಕಳೆದಂತೆ ಆಧುನಿಕತೆಯ ಆರ್ಭಟದಲ್ಲಿ ಕೈಮಗ್ಗ ಉದ್ದಿಮೆಯು ನಶಿಸುತ್ತಾ ಬಂದಿತು. ಗಿರಣಿಗಳಲ್ಲಿ ತಯಾರಾದ ಆಧುನಿಕ ಸ್ಪರ್ಶದ ಬಟ್ಟೆಗಳ ಭರಾಟೆಯಲ್ಲಿ ಕ್ಷೀಣಿಸುತ್ತಿದ್ದ ಈ ಉದ್ದಿಮೆಯು ನೇಕಾರನ ಕೌಶಲ್ಯಕ್ಕೆ ಹಿಡಿದ ಕೈಗನ್ನಡಿಯಂತಿದ್ದು ಇದನ್ನು ಸಂರಕ್ಷಿಸಬೇಕೆಂದು ಸರ್ಕಾರಗಳು ಹಲವಾರು ಯೋಜನೆಗಳನ್ನೂ, ಕಾನೂನುಗಳನ್ನೂ ಜಾರಿಗೆ ತಂದವು.

ಇದರ ಅಂಗವಾಗಿ ಕೇಂದ್ರ ಸರ್ಕಾರವು ಕೈಮಗ್ಗ ಮೀಸಲಾತಿ ಅಧಿನಿಯಮ–2000 ವನ್ನು ರೂಪಿಸಿ ಜಾರಿಗೆ ತಂದಿತು. ಏನೇ ಆದರೂ ಕೈಮಗ್ಗ ಉದ್ದಿಮೆಯನ್ನು ನಿರೀಕ್ಷಿತ ಮಟ್ಟದಲ್ಲಿ ಸಂರಕ್ಷಿಸಿ ಅಭಿವೃದ್ಧಿಪಡಿಸಲು ಸಾಧ್ಯವಾಗಲಿಲ್ಲ. 1970 ರ ದಶಕದಲ್ಲಿ ರಾಜ್ಯದಲ್ಲಿ ಸುಮಾರು ಒಂದು ಲಕ್ಷಕ್ಕೂ ಮಿಗಿಲಾಗಿದ್ದ ಕೈಮಗ್ಗ ನೇಕಾರರ ಕುಟುಂಬಗಳು ಈ ವೃತ್ತಿಯನ್ನು ತೊರೆ–ಯುತ್ತಾ, ಬಂದು ಐದು ದಶಕಗಳ ನಂತರ ಇಂದು ರಾಜ್ಯದಲ್ಲಿ ಕೈಮಗ್ಗ ನೇಕಾರರ ಸಂಖ್ಯೆ ಕೇವಲ 10 ಸಾವಿರದಷ್ಟಿದೆ.



ಕೈಮಗ್ಗದಲ್ಲಿ ತಯಾರಾಗುವ ಬಟ್ಟೆಗಳು ತನ್ನದೇ ಆದ ವೈಶಿಷ್ಟ್ಯಗಳನ್ನು ಉಳಿಸಿಕೊಂಡಿದ್ದು ಇಂದಿಗೂ ಮಾರುಟ್ಟೆಯಲ್ಲಿ ತನ್ನದೇ ಆದ ವಿಶಿಷ್ಟ ಸ್ಥಾನವನ್ನು ಉಳಿಸಿಕೊಂಡಿವೆ. ಇದಕ್ಕೆ ಪೂರಕವಾಗಿ ಈ ಉದ್ದಿಮೆಯ ಸಂರಕ್ಷಣೆಗಾಗಿ ಸರ್ಕಾರವೂ ಬದ್ಧತೆಯಿಂದ ಕೈಜೋಡಿಸಿದೆ. ಅದರ ಅಂಗವಾಗಿಯೇ ಕೇಂದ್ರ ಸರ್ಕಾರವು ಕೈಮಗ್ಗ ದಿನಾಚರಣೆಯನ್ನು ಘೋಷಿಸಿ ಜಾರಿಗೆ ತಂದಿದೆ.

ಪ್ರಸ್ತುತ ರಾಜ್ಯದ ಹೊಸ ಜವಳಿ ಮತ್ತು ಉಡುಪು ನೀತಿ (4.0) 2026–31 ಪರಿವರ್ತನೆಯನ್ನು ವೇಗಗೊಳಿಸಲು ಮಹತ್ವದ ಅವಕಾಶವನ್ನು ಒದಗಿಸುತ್ತಿದೆ. ಹೂಡಿಕೆಗಳನ್ನು ಆಕರ್ಷಿಸುವುದು, ಉತ್ಪಾದನೆಯನ್ನು ಆಧುನೀಕರಿಸುವುದು, ರಫ್ತುಗಳನ್ನು ಉತ್ತೇಜಿಸುವುದು, ಸಾಂಪ್ರದಾಯಿಕ ಕೈಗಾರಿಕೆಗಳನ್ನು ಬಲಪಡಿಸುವುದು ಮತ್ತು ವಿವಿಧ ಕ್ಷೇತ್ರಗಳಲ್ಲಿ ಉದ್ಯೋಗ ಸೃಷ್ಟಿಸುವುದು ಇದರ ಉದ್ದೇಶವಾಗಿದೆ.

ವಿವಿಧ ನೇಕಾರರು ರೂಪಿಸಿದ ಕೈಮಗ್ಗ ನೇಯ್ಗೆಯ ವಿವಿಧ ಆಕರ್ಷಕ ವಿನ್ಯಾಸಗಳು:

1) ಹುಲಿ ಕವಿಲೆಮನೆಆಟ – ಹತ್ತಿಮ್ಯಾಟ್:ಕೈಮಗ್ಗದಲ್ಲಿನೇಯ್ದಸ್ಥಳೀಯ ಜಾನಪದ ಆಟದ ಒಂದು ವಿನ್ಯಾಸ.

2. ಮೊಳಕಾಲ್ಮೂರು ಸೀರೆಯಲ್ಲಿ ಅರಳಿದ ರೈತನ ಬದುಕು: ಕೈಮಗ್ಗದಲ್ಲಿ ನೇಯ್ದ ಹಾಗೂ ಭೌಗೋಳಿಕ ಸೂಚನೆಯ ಮಾನ್ಯತೆ (ಜಿ.ಐ. ಟ್ಯಾಗ್) ಪಡೆದ ಸಾಂಪ್ರದಾಯಿಕ ರೇಷ್ಮೆ ಸೀರೆ.

3) ಪ್ಯಾಚ್ ವರ್ಕ್ ಕಸೂತಿ – ಲಂಬಾಣಿ ವಿನ್ಯಾಸದ ಕಸೂತಿ: ಒಂದು ಸಾಂಪ್ರದಾಯಿಕ ಸೂಕ್ಷ್ಮ ಕೈ ಕಸೂತಿಯಿಂದ ತಯಾರಿಸಲಾದ ಪ್ಯಾಚ್ವರ್ಕ್. ಇದನ್ನು ಲಂಬಾಣಿ ದಿರಿಸುಗಳ ಮೇಲೆ ಮಾಡಲಾಗುತ್ತದೆ. ಅತಿ ಸೂಕ್ಷ್ಮ ಹಾಗೂ ನಿಖರತೆ ಹೊಲಿಗೆಗಳನ್ನು ಹೊಂದಿರುವ ವಿನ್ಯಾಸ. ಮಹಿಳೆಯರಿಗೆ ಉದ್ಯೋಗ ಅವಕಾಶಗಳನ್ನು ಸೃಜಿಸುವ ಕಲೆ.

4) ಆಪ್ಟಿಕಲ್ ಇಲ್ಯೂಷನ್ ವಿನ್ಯಾಸದ ಬೆಡ್ಶೀಟ್: 8 ಕಾಲ್ಚೆಕ್ಕೆಗಳ ಕೈಮಗ್ಗದಲ್ಲಿ ನೇಯ್ದ ಆಪ್ಟಿಕಲ್ ಇಲ್ಯೂಷನ್ ವಿನ್ಯಾಸದ ಡಬಲ್ ಕ್ಲಾಥ್ ಹತ್ತಿ ಬೆಡ್ಶೀಟ್.

5)ಸಾಂಪ್ರದಾಯಿಕಇಳಕಲ್ಲಿರೆ:ಸೀರೆಯಸೆರಗಿನಲ್ಲಿಬಸವಣ್ಣನವರಐಕ್ಯವ ಸಂಬಂಧಿಸಿದಚಿತ್ರಣವನ್ನುಚಿತ್ರಿಸುವಪದವಿನ್ಯಾಸವನ್ನುನೇಯ್ದಿರುವಜಿ.ಐ. ಟ್ಯಾಗ್ಹೊಂದಿರುವಸಾಂಪ್ರದಾಯಿಕಹತ್ತಿಇಳಕಲ್ಲಿರೆ.

6) ರಾಮಾಯಣದಿಂದಪ್ರೇರಿತವಾದಬಂಗಾರದಜಿಂಕೆವಿನ್ಯಾಸದ ಸೀರೆ: ಸೀರೆಯಲ್ಲಿರಾಮಾಯಣಕತೆಯಿಂದಪ್ರೇರಿತವಾದಸಂಪದ್ಭರಿತ ಬಂಗಾರದಜಿಂಕೆವಿನ್ಯಾಸವನ್ನುಆಧುನಿಕತಂತ್ರಜ್ಞಾನದ 960 ಹುಕ್ಕಗಳಎಲೆಕ್ಟ್ರಾನಿಕ್ಜಕಳವಡಿಸಿದಕೈಮಗ್ಗದಲ್ಲಿನೇಯ್ದಿರುವಅಪ್ಪಟರೇಷ್ಮೆಸೀರೆ.

ಈ ಉತ್ಪನ್ನಗಳು ಕೇವಲ ವಾಣಿಜ್ಯ ಸರಕುಗಳಲ್ಲ; ಅವು ಕರ್ನಾಟಕದ ಸಾಂಸ್ಕೃತಿಕ ಗುರುತು ಮತ್ತು ಸಾಂಪ್ರದಾಯಿಕ ಪರಂಪರೆಯನ್ನು ಪ್ರತಿನಿಧಿಸುತ್ತವೆ. ಕುಶಲಕರ್ಮಿಗಳ ಜೀವನೋಪಾಯವನ್ನು ಉಳಿಸಲು ಮತ್ತು ಈ ಕೌಶಲ್ಯಗಳನ್ನು ಮುಂದಿನ ಪೀಳಿಗೆಗೆ ತಲುಪಿಸಲು ಅವುಗಳ ಸಂರಕ್ಷಣೆ ಮತ್ತು ಉತ್ತೇಜನ ಅತ್ಯಗತ್ಯ. ಆದುದರಿಂದ, ಕೈಮಗ್ಗದ ನೇಕಾರರನ್ನು ಉತ್ತೇಜಿಸಿ ಅವರ ವೃತ್ತಿಯನ್ನು ಮುಂದುವರೆಸಲು ಹಾಗೂ ಲಾಭದಾಯಕವಾಗಿ ಮಾಡಲು ರಾಜ್ಯದ ಶಕ್ತಿ ಕೇಂದ್ರವಾದ ಬೆಂಗಳೂರಿನ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್ನಲ್ಲಿ ರಾಜ್ಯದ ಕೈಮಗ್ಗ ನೇಕಾರರು ಉತ್ಪಾದಿಸಿರುವ ಉತ್ಪನ್ನಗಳ ಮಾದರಿಗಳನ್ನು ಫೋಟೋ ಫ್ರೇಂನಲ್ಲಿ ಅಳವಡಿಸಲಾಗಿದೆ. ಇದರಿಂದ ವಿಧಾನಸೌಧಕ್ಕೆ ಭೇಟಿ ನೀಡುವ ಅತಿಥಿಗಳಿಗೆ ರಾಜ್ಯದ ಕೈಮಗ್ಗ ನೇಕಾರರು ತಯಾರಿಸುವ ಸಾಂಪ್ರದಾಯಿಕ ಉತ್ಪನ್ನಗಳ ಪರಿಚಯ ಮಾಡಿಕೊಟ್ಟಂತೆ ಆಗಿ ಆ ಉತ್ಪನ್ನಗಳಿಗೆ ಪರೋಕ್ಷವಾಗಿ ಮಾರುಕಟ್ಟೆ ಒದಗಿಸಿದಂತೆ ಆಗುತ್ತದೆ.

ಬ್ಯಾಂಡಿಂಗ್, ಪ್ಯಾಕೇಜಿಂಗ್, ಗುಣಮಟ್ಟ ಪ್ರಮಾಣೀಕರಣ, ಉತ್ಪನ್ನಗಳ ಪ್ರಮಾಣೀಕರಣ ಮತ್ತು ಮಾರುಕಟ್ಟೆಗೊಳಿಸುವಿಕೆಗೆ ಸಮನ್ವಯಿತ ವಿಧಾನವನ್ನು ಅನುಸರಿಸುವುದರಿಂದ ದೇಶೀಯ ಹಾಗೂ ಅಂತರರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಅವುಗಳ ಸ್ಥಾನವನ್ನು ಗಣನೀಯವಾಗಿ ಹೆಚ್ಚಿಸಬಹುದು.

ಜವಳಿ ಮೂಲಸೌಕರ್ಯ ಮತ್ತು ಕೈಗಾರಿಕಾ ಅಭಿವೃದ್ಧಿಯನ್ನು ಬಲಪಡಿಸುವುದು

ಜವಳಿ ಉತ್ಪಾದನೆ, ಸಂಸ್ಕರಣೆ, ನೇಕಾರಿಕೆ ಮತ್ತು ಉಡುಪು ತಯಾರಿಕೆಗೆ ಅಗತ್ಯವಾದ ಮೂಲಸೌಕರ್ಯ ಒದಗಿಸುವ ಉದ್ದೇಶದಿಂದ ಕರ್ನಾಟಕವು ರಾಜ್ಯದಾದ್ಯಂತ 11 ಜವಳಿ ಪಾರ್ಕ್ಗಳನ್ನು ಸ್ಥಾಪಿಸಿದೆ.

ಕಲಬುರಗಿಯಲ್ಲಿ ಸುಮಾರು 1,000 ಎಕರೆ ಪ್ರದೇಶದಲ್ಲಿ ಪ್ರಧಾನಮಂತ್ರಿ ಮೆಗಾ ಇಂಟಿಗ್ರೇಟೆಡ್ ಟೆಕ್ಸ್‌ಟೈಲ್ ರೀಜನ್ ಅಂಡ್ ಅಪ್ಪಾರಲ್ (ಪಒ–ಒಖಖಿಖಂ) ಪಾರ್ಕ್ ಸ್ಥಾಪನೆ. ನಾರು ಮತ್ತು ನೂಲು ಉತ್ಪಾದನೆಯಿಂದ ಹಿಡಿದು ನೇಕಾರಿಕೆ, ಸಂಸ್ಕರಣೆ ಹಾಗೂ ಉಡುಪು ತಯಾರಿಕೆಯವರೆಗೆ ಸಂಪೂರ್ಣ ಮೌಲ್ಯ ಸರಪಳಿಯನ್ನು ಒಳಗೊಂಡ ಸಮಗ್ರ ಜವಳಿ ಉತ್ಪಾದನಾ ವ್ಯವಸ್ಥೆಯಾಗಿ ಈ ಪಾರ್ಕ್ ಅನ್ನು ರೂಪಿಸುವ ಉದ್ದೇಶವಿದೆ. ಇದು ಗಣನೀಯ ಹೂಡಿಕೆಗಳನ್ನು ಆಕರ್ಷಿಸುವ, ಉದ್ಯೋಗ ಸೃಷ್ಟಿಸುವ ಮತ್ತು ಕಲ್ಯಾಣ ಕರ್ನಾಟಕ ಪ್ರದೇಶದ ಕೈಗಾರಿಕಾ ಅಭಿವೃದ್ಧಿಯನ್ನು ಬಲಪಡಿಸುವ ಸಾಮರ್ಥ್ಯ ಹೊಂದಿದೆ.

ಬಾಳೆ ನಾರಿನ ಮೂಲಕ ಸುಸ್ಥಿರ ಜವಳಿ ಉತ್ಪನ್ನಗಳ ಉತ್ತೇಜನ

ಕರ್ನಾಟಕದ ಜವಳಿ ಕ್ಷೇತ್ರಕ್ಕೆ ಉದಯೋನ್ಮುಖ ಅವಕಾಶಗಳಲ್ಲಿ ಒಂದು ಕೃಷಿ ತ್ಯಾಜ್ಯ ಮತ್ತು ನೈಸರ್ಗಿಕ ನಾರುಗಳು ವಿಶೇಷವಾಗಿ ಬಾಳೆ ನಾರಿನ ಬಳಕೆಯಾಗಿದೆ. ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ಒಟ್ಟಾರೆಯಾಗಿ ಸುಮಾರು 53,692 ಹೆಕ್ಟೇರ್ ಪ್ರದೇಶದಲ್ಲಿ ಬಾಳೆ ಬೆಳೆಯಲಾಗುತ್ತದೆ. ಸಾಮಾನ್ಯವಾಗಿ ಪೂರ್ಣ ಪ್ರಮಾಣದಲ್ಲಿ ಬಳಸದೆ ಉಳಿಯುವ ಬಾಳೆ ದಿಂಡುಗಳ ತ್ಯಾಜ್ಯ ಮತ್ತು ಇತರ ಸಸ್ಯ ಅವಶೇಷಗಳನ್ನು ಸೂಕ್ತ ತಾಂತ್ರಿಕ ಕ್ರಮಗಳ ಮೂಲಕ ಮೌಲ್ಯಯುತ ಜವಳಿ ಕಚ್ಚಾ ವಸ್ತುಗಳಾಗಿ ಪರಿವರ್ತಿಸಬಹುದು. ಬಾಳೆ ನಾರಿನಿಂದ ನೂಲು, ಬಟ್ಟೆ, ಕರಕುಶಲ ವಸ್ತುಗಳು, ಗೃಹೋಪಯೋಗಿ ಅಲಂಕಾರಿಕ ವಸ್ತುಗಳು, ಚೀಲಗಳು, ಚಾಪೆಗಳು, ಪರಿಸರ ಸ್ನೇಹಿ ಸ್ಯಾನಿಟರಿ ಪ್ಯಾಡ್ಗಳು ಮತ್ತು ಇತರ ಮೌಲ್ಯವರ್ಧಿತ ಉತ್ಪನ್ನಗಳನ್ನು ತಯಾರಿಸಲು ಅವಕಾಶಗಳಿವೆ. ಪರಿಸರ ಸ್ನೇಹಿ ಮತ್ತು ವೃತ್ತಾಕಾರದ ಜವಳಿ ಉತ್ಪಾದನಾ ಪದ್ಧತಿಗಳ ಅಭಿವೃದ್ಧಿಗೂ ಇದು ಕೊಡುಗೆ ನೀಡಬಹುದು.

ಬಾಳೆ ನಾರಿನಿಂದ ತಯಾರಾದ ಉಡುಪು : ಬಾಳೆ ನಾರಿನ ಸೀರೆ ಬಾಳೆ ನಾರಿನ ಯೋಗ ಮ್ಯಾಟ್ ಬಾಳೆ ನಾರಿನ ಗೋಡೆ ಅಲಂಕಾರಗಳು ಬಾಳೆ ನಾರಿನ ಆಕರ್ಷಕ ಬ್ಯಾಗ್ ಪರಿಸರ ಸ್ನೇಹಿ ಬಾಳೆ ನಾರಿನ ಸ್ಯಾನಿಟರಿ ಪ್ಯಾಡ್

ಬಾಳೆ ಬೆಳೆಯುವ ಸೂಕ್ತ ಪ್ರದೇಶಗಳಲ್ಲಿ ಸಂಶೋಧನಾ ಸಂಸ್ಥೆಗಳು, ತಾಂತ್ರಿಕ ಸಂಸ್ಥೆಗಳು, ಉದ್ಯಮಿಗಳು ಮತ್ತು ರೈತ ಸಂಘಟನೆಗಳ ಸಹಯೋಗವನ್ನು ಉತ್ತೇಜಿಸುವ ಮೂಲಕ ರಾಜ್ಯವು ಬಾಳೆ ನಾರು ಆಧಾರಿತ ಕೈಗಾರಿಕೆಗಳನ್ನು ಪ್ರೋತ್ಸಾಹಿಸಬಹುದು. ತಂತ್ರಜ್ಞಾನ ಪ್ರಾತ್ಯಕ್ಷಿಕೆಗಳು, ಪ್ರಾಯೋಗಿಕ ಉತ್ಪಾದನಾ ಘಟಕಗಳು,